6

# ಸುವಾರ್ತೆ ಪ್ರಕಟನೆಯ ಪ್ರಾರಂಭವು ಪರಿಪೂರ್ಣವಾಗಿ ಸಾರಲ್ಪಟ್ಟದ್ದು

## (2:14-36)

"ಪೇತ್ರನು ಮೊದಲ ಸುವಾರ್ತಾ ಪ್ರಸಂಗವನ್ನು ಮಾಡಿದನು" ಎಂದು ನಾವು ಕೆಲವೊಮ್ಮೆ ಹೇಳುತ್ತೇವೆ. ಈ ಹೇಳಿಕೆಯು ಅರ್ಥವಾಗಬೇಕು. "ಸುವಾರ್ತೆ" ಎಂಬ ಪದದ ಅರ್ಥ "ಒಳ್ಳೆ ಸುದ್ದಿ."[1] ಮತ್ತಾಯ, ಮಾರ್ಕ, ಲೂಕ ಮತ್ತು ಯೋಹಾನ ಇವು "ಸುವಾರ್ತೆಗಳು" ಎಂದು ಕರೆಯಲ್ಪಡುತ್ತವೆ (ಮಾರ್ಕ 1:1 ನೋಡಿರಿ); ಅಂದರೆ ಅದು ಯೇಸುವಿನ ಜೀವನ ಮತ್ತು ಸೇವೆಯ ಕುರಿತು ಒಳ್ಳೇ ಸುದ್ದಿಯನ್ನು ಹೇಳುತ್ತವೆ. ಯೇಸುವಿನ ಜನನವನ್ನು "ಒಳ್ಳೆ ಸುದ್ದಿ" ಎಂದು ಕರೆಯಲಾಗುತ್ತವೆ (ಲೂಕ 2:10; KJVಯಲ್ಲಿ "ಮಹಾ ಸಂತೋಷದ ಸುದ್ದಿ" ಎಂದಿದೆ). ಯೇಸು ತನ್ನ ವೈಯಕ್ತಿಕ ಸೇವೆಯನ್ನು ಪ್ರಾರಂಭಿಸಿದಾಗ, ಅವನು ಸುವಾರ್ತೆಯನ್ನು ಸಾರಿದನು (ಲೂಕ 4:18; ಮತ್ತಾಯ 11:5; ಲೂಕ 7:22; 9:6; 20:1), ಅದರಲ್ಲಿ ವಿಶೇಷವಾಗಿ "ದೇವರ ರಾಜ್ಯದ ಸುವಾರ್ತೆ" (ಮತ್ತಾಯ 4:23; ನೋಡಿರಿ 9:35; 24:14; ಮಾರ್ಕ 1:14, 15). ಆತನು ದೇವರ ರಾಜ್ಯವು "ಸಮೀಪಿಸಿತು" ಎಂದು ಸಾರಿದನು (ಮತ್ತಾಯ 4:17).

"ಸುವಾರ್ತೆಗೂ" ಮತ್ತು "ಸುವಾರ್ತೆ ಸಾರುವದಕ್ಕೂ" ಅನೇಕ ವಾಕ್ಯಸೂಚನೆಗಳು ಅಪೊಸ್ತಲರ ಕೃತ್ಯಗಳು 2ರ ಮೊದಲು ಇರುವದರಿಂದ, ಸಂಪೂರ್ಣವಾಗಿ ಸುವಾರ್ತೆಯನ್ನು ಮೊದಲು *ಸಾರಿದವನು* ಪೇತ್ರನೇ ಎಂದು ಹೇಳಬಹುದು. 1 ಕೊರಿಂಥ 15:1-4ರಲ್ಲಿ, ಸುವಾರ್ತೆಯ ತಿರುಳು ಯೇಸುವಿನ ಮರಣ, ಹೂಣಲ್ಪಡುವದು ಮತ್ತು ಪುನರುತ್ಥಾನದಲ್ಲಿದೆ ಎಂದು ಪೌಲನು ಹೇಳುತ್ತಾನೆ. ಯೇಸುವಿನ ಪುನರುತ್ಥಾನಕ್ಕಿಂತ ಮೊದಲು ಈ ಶ್ರೇಷ್ಠವಾದ ಸತ್ಯವನ್ನು ಸಂಪೂರ್ಣವಾಗಿ ಸಾರಲು ಸಾಧ್ಯವಿರಲಿಲ್ಲ. ಪೇತ್ರನು ಇದನ್ನು ಅಪೊಸ್ತಲರ ಕೃತ್ಯಗಳು 2:14-36ರಲ್ಲಿ ಮೊದಲ ಬಾರಿಗೆ ಮಾಡಿದನು.

ಪೇತ್ರನು ಯೇಸುವಿನ ಕುರಿತ ಸಾಕ್ಷಿಯನ್ನು ಮತ್ತಾಯ 16ರಲ್ಲಿ ಮಾಡಿದಾಗ, ಈ ಪ್ರಸಂಗವನ್ನು ಸಾರಲು ಅವನಿಗೆ ಅವಕಾಶ ದೊರಕುವದೆಂದು ಯೇಸು ವಾಗ್ದಾನ ಮಾಡಿದ್ದನು. ಪೇತ್ರನನ್ನು ನಿಮ್ಮ ಮನಸ್ಸಿನಲ್ಲಿ ಚಿತ್ರಿಸಿಕೊಳ್ಳಿರಿ: ಒಬ್ಬ ಉನ್ನತ ವ್ಯಕ್ತಿಯ, ಅಲೆಮಾರಿಯ ಲಕ್ಷಣಗಳು, ನೆಟ್ಟಗೆ ಎತ್ತರವಾಗಿ ನಿಂತಿರುವವನು, ಜನರ ಗುಂಪು ಶಾಂತವಾಗುವದಕ್ಕೆ ಕಾಯ್ದು, ಎಂದಿಗೂ ಸಾರಲ್ಪಡದ ಪ್ರಸಂಗವನ್ನು ಸಾರುವದಕ್ಕೆ ಕಾಯುತ್ತಿದ್ದಾನೆ. ಕೆಲವು ವಾರಗಳ ಮೊದಲು, ಅವನು ಯೇಸುವನ್ನು ಅಲ್ಲಗಳೆದಿದ್ದನು; ಈಗ ಆತನನ್ನು ಸಾರುವದಕ್ಕೆ ಸಿದ್ಧನಾಗಿದ್ದಾನೆ!

ಪೇತ್ರನ ಮಾತುಗಳನ್ನು ನೀವು ಅನೇಕ ಬಾರಿ ಕೇಳಿರಬಹುದು. ಆದರೆ ಈಗ ಅದನ್ನು ಮೊದಲ ಬಾರಿ ಕೇಳುತ್ತಿರುವವರಂತೆ ಕೇಳಿರಿ. "ಮೊದಲ ಸುವಾರ್ತಾ ಪ್ರಸಂಗವು" ಶ್ರೇಷ್ಠವಾಗಿತ್ತು; ಗ್ರಹಿಸಲಾರದ ತಪಿತಸ್ಥ ಮನೋಭಾವನೆಯನ್ನು ಗ್ರಹಿಸಲಾರದ ಕೃಪೆಯು ಆವರಿಸಿಕೊಳ್ಳುವ ಸಂದೇಶ ಆದಾಗಿದೆ.

ತಾನು ಮತ್ತು ಇತರ ಅಪೊಸ್ತಲರು ಮದ್ಯ ಪಾನ ಮಾಡಿದ್ದೇವೆಂಬ ಆಪಾದನೆಯನ್ನು ಪೇತ್ರನು ಅಲ್ಲಗಳೆಯುವ ಮೂಲಕ ಪ್ರಾರಂಭಿಸಿದನು.

> ಆಗ ಪೇತ್ರನು ಹನ್ನೊಂದು ಮಂದಿ ಅಪೊಸ್ತಲರ[2] ಸಹಿತ ಎದ್ದು ನಿಂತು ಘಟ್ಟಿಯಾದ ಧ್ವನಿಯಿಂದ ಅವರಿಗೆ ಹೀಗೆ ಪ್ರಸಂಗಮಾಡಿದನು - ಯೆಹೂದ್ಯರೇ ಯೆರೂಸಲೇಮಿನಲ್ಲಿ[3] ವಾಸವಾಗಿರುವ ಎಲ್ಲಾ ಜನರೇ, ಈ ಸಂಗತಿಯು ಏನೆಂದು ನಿಮಗೆ ಗೊತ್ತಾಗುವ ಹಾಗೆ ನನ್ನ ಮಾತಿಗೆ ಕಿವಿಗೊಡಿರಿ; ನೀವು ಭಾವಿಸಿದಂತೆ ಇವರು ಅಮಲೇರಿದವರಲ್ಲ; ಈಗ ಬೆಳಿಗ್ಗೆ ಒಂಭತ್ತು ಘಂಟೆಯಾಗಿದೆಯಷ್ಟೆ (ವಚನಗಳು 14, 15).

"ದಿನದ ಮೂರನೇಯ ತಾಸು" ಅಂದರೆ ಬೆಳಿಗ್ಗೆ ಸುಮಾರು ಒಂಬತ್ತು ಘಂಟೆ.[4] ನಾನು ಬೆಳೆದ ಸ್ಥಳದಲ್ಲಿ ಪೇತ್ರನ ವಾಗ್ವಾದಕ್ಕೆ ಯಾವ ಅರ್ಥವಿಲ್ಲ; ಹಗಲು ಮತ್ತು ರಾತ್ರಿಯ ಎಲ್ಲ ಸಮಯದಲ್ಲಿ ಜನರು ಮದ್ಯಪಾನ ಮಾಡುತ್ತಿದ್ದರು! ಪೇತ್ರನ ಮಾತುಗಳನ್ನು ಕೇಳುತ್ತಿದ್ದವರಿಗೆ, ಈ ವಾಗ್ವಾದವು ಸರಿಯೆಂದು ತೋರಿತು. ಯಾಕೆಂದರೆ ಧರ್ಮ ನಿಷ್ಠ ಯೆಹೂದ್ಯರು ಬೆಳಿಗ್ಗೆ 9.00 ಘಂಟೆಗೆ ಮುಂಚೆ ಸಬ್ಬತ್ ದಿನ ಮತ್ತು ಇತರ ಪವಿತ್ರ ದಿನಗಳಲ್ಲಿ ಊಟ ಮಾಡಲಿಲ್ಲ ಅಥವಾ ಕುಡಿಯಲಿಲ್ಲ.[5]

## ಯೋವೇಲನ ಪ್ರವಾದನೆ (2:16-21)

ಜನರ ಗುಂಪು ಅಲ್ಲಿ ನೋಡಿದ್ದು ಮತ್ತು ಕೇಳಿದ್ದು ಮದ್ಯಪಾನ ಮಾಡಿದ್ದರಿಂದಲ್ಲ ಆದರೆ ದೈವಿಕ ಆತ್ಮನ ಸುರಿಯುವಿಕೆಯಿಂದ ಎಂದು ಪೇತ್ರನು ವಿವರಿಸಿದನು. ಅವರು, "ಆದರೆ ಇದು ಪ್ರವಾದಿಯಾದ ಯೋವೇಲನ ಮೂಲಕವಾಗಿ ಹೇಳಿಸಿದ ಸಂಗತಿ. ಅದೇನೆಂದರೆ - ಕಡೆ ದಿವಸಗಳಲ್ಲಿ ನಾನು ಎಲ್ಲಾ ಮನುಷ್ಯರ ಮೇಲೆ ನನ್ನ ಆತ್ಮವನ್ನು ಸುರಿಸುವೆನು" (ವಚನಗಳು 16, 17). ಪೇತ್ರನ ಈ ಹೇಳಿಕೆಯು ಯೋವೇಲ 2:28-32ರಲ್ಲಿ ಬರೆದದೆ.[6] ಪೇತ್ರನು ಮೊದಲು ಕೊನೇ ದಿನಗಳ ಕುರಿತು ಮಾತಾಡಿದನು.[7] ಯೆಹೂದ್ಯರಿಗೆ "ಕೊನೇ ದಿನಗಳು" ಅಂದರೆ ಮೆಸ್ಸಿಯನ ಆಳ್ವಿಕೆಯ ದಿನಗಳನ್ನು ನೆನಪಿಗೆ ತುರುತ್ತಿತ್ತು.[8] ಪೇತ್ರನು ಹೇಳಿದ್ದು, ಒಟ್ಟಾರೆಯಾಗಿ, "ಶತಮಾನಗಳಿಂದ ನೀವು ಕಾಯುತ್ತಿದ್ದ ಕ್ಷಣವು ಇಲ್ಲಿದೆ! ಕೊನೇ ದಿನಗಳು ಬಂದಿವೆ!" ಬಹುಕಾಲದ ನಂತರ ಇಬ್ರಿಯರ ಪತ್ರಿಕೆಯ ಲೇಖಕರು, "... ದೇವರು *ಈ ಅಂತ್ಯ ದಿನಗಳಲ್ಲಿ* ನಮ್ಮ ಸಂಗಡ ಮಗನ ಮುಖಾಂತರು ಮಾತಾಡಿದ್ದಾನೆ" (ಇಬ್ರಿಯ 1:1, 2; ಒತ್ತಿ ಹೇಳಿದ್ದು ನನ್ನದು).[9] ಕೆಲವರ ಪ್ರಕಾರ "ಅಂತ್ಯ ದಿನಗಳು" ಇನ್ನೂ ಮುಂದೆ ಇದೆ,[10] ಆದರೆ ನಾವು "ಅಂತ್ಯ ದಿನಗಳಲ್ಲಿ" ಈಗಲೇ ಜೀವಿಸುತ್ತಿದ್ದೇವೆ.[11] ಕ್ರಿಸ್ತನು ಎಲ್ಲಾ ಮನುಷ್ಯರನ್ನು ನ್ಯಾಯತೀರ್ವಿಕೆಗೆ ಒಳಪಡಿಸಲು ಬರುವ ಮೊದಲು ಕ್ರೈಸ್ತ ಯುಗವು ಸಮಯದ ಕೊನೇ ಕಾಲವಾಗಿದೆ!

ಯೋವೇಲನ ಪ್ರವಾದನೆಯ ಪ್ರಕಾರ, "ಅಂತ್ಯ ದಿನಗಳಲ್ಲಿ" ಏನಾಗುತ್ತದೆ?

> "ಅದೇನೆಂದರೆ ಕಡೇ ದಿವಸಗಳಲ್ಲಿ ನಾನು ಎಲ್ಲಾ ಮನುಷ್ಯರ ಮೇಲೆ[12] ನನ್ನ ಆತ್ಮವನ್ನು ಸುರಿಸುವೆನು; ನಿಮ್ಮಲ್ಲಿರುವ ಗಂಡಸರೂ ಹೆಂಗಸರೂ ಪ್ರವಾದಿಸುವರು; ನಿಮ್ಮ ಯೌವನಸ್ಥರಿಗೆ ದಿವ್ಯದರ್ಶನಗಳಾಗುವವು; ನಿಮ್ಮ ಹಿರಿಯರಿಗೆ ಕನಸುಗಳು ಬಿಳುವವು;[13] ಇದಲ್ಲದೆ ಆ ದಿನಗಳಲ್ಲಿ[14] ನನ್ನ ದಾಸದಾಸಿಯರ ಮೇಲೆಯೂ ನನ್ನ ಆತ್ಮವನ್ನು ಸುರಿಸುವೆನು; ಅವರೂ ಪ್ರವಾದಿಸುವರು" (ವಚನಗಳು 17, 18).

ಮಲಾಕಿಯನು ಬರೆಯುವದನ್ನು ತೀರಿಸಿ ತನ್ನ ಶಾಯಿಯನ್ನು ಕೆಳಗೆ ಇಟ್ಟಾಗ, ಭೂಮಿಯ ಮೇಲಿಂದ ಪ್ರವಾದನೆಯ ಸಂದೇಶವು ಕಾಣಿಸದೇ ಹೋಯಿತು, "ಅಂತ್ಯ ದಿನಗಳು" ಬರುವವರೆಗೆ, ಅಂದರೆ ಮೆಸ್ಸಿಯನು ಆಗಮಿಸುವವರೆಗೆ ಅದು ಮತ್ತೆ ಕಾಣಿಸಲಿಲ್ಲ ಎಂದು ಯೆಹೂದ್ಯರು ತಿಳುಕೊಂಡಿದ್ದಾರೆ. ಸ್ನಾನಿಕನಾದ ಯೋಹಾನನ ಪ್ರಸಂಗದ ಕುರಿತು ಅವರು ಬಹಳ ಉತ್ತೇಜಿತರಾಗುಲೆದ್ದರು, ನೊಡುತ್ತಿದ್ದರು. ಅವರು ಸೀಮಿತ ರೀತಿಯಲ್ಲಿ ನೋಡಿದ ಮತ್ತು

ಕೆಲವರಿಗೆ ಮಾತ್ರ ಯೋಹಾನ ಮತ್ತು ಯೇಸುವಿನ ವೈಯಕ್ತಿಕ ಸೇವೆಯಲ್ಲಿ ಸೀಮಿತವಾಗಿದ್ದ ಸಂಗತಿಗಳು ಈಗ ವಿಸ್ತಾರಗೊಳ್ಳುತ್ತಿದೆ ಎಂದು ಪೇತ್ರನು ಅವರಿಗೆ ಹೇಳಿದನು. ಬಿರುಗಾಳಿಯ ಶಬ್ಧ, ಮತ್ತು ಅನ್ಯ ಭಾಷೆಗಳಲ್ಲಿ ಮಾತಾಡುವದು ಎಲ್ಲವೂ ಪರಿಶುದ್ಧಾತ್ಮನ ಸುರಿಯುವಿಕೆಯನ್ನು ಸಾರಿತು! ಯೋವೇಲನು ಮುಂಬರುವ ದಿನಗಳಲ್ಲಿ, ಅದ್ಭುತ ವರಗಳು ಕೊಡಲ್ಪಡುವವು, ಹಿಂದಿನ ಕಾಲದಲಿದ್ದಂತೆ ಕೇವಲ ಕೆಲವರಗೆ ಮಾತ್ರವಾಗಿರದೇ, ಎಲ್ಲಾ ಮನುಷ್ಯರಿಗೆ - ಲಿಂಗ,[16] ವಯಸ್ಸು[17] ಅಥವಾ ಸಾಮಾಜಿಕ ಅಂತಸ್ತು[18] ಎಂದು ಯೋವೇಲನು ಪ್ರವಾದಿಸಿದ್ದನು. ("ಎಲ್ಲಾ ಮನುಷ್ಯರು" ಎನ್ನುವಾಗ ಭೂಮಿಯ ಮೇಲಿನ ಪ್ರತಿ ವ್ಯಕ್ತಿಯನ್ನು ಅದು ಸೂಚಿಸುವದಿಲ್ಲ ವೆಂದು ನಾವು ತಿಳುಕೊಳ್ಳಬೇಕು.[19] "ಎಲ್ಲಾ ಮನುಷ್ಯರು" ಎನ್ನುವಾಗ ಅದು ಮನುಷ್ಯ ಕುಲದ ಒಂದು ಗುಂಪನ್ನು ಸೂಚಿಸುತ್ತದೆ.)

ನಿಮ್ಮ ಸತ್ಯವೇದದಲ್ಲಿ ವಚನಗಳು 17 ಮತ್ತು 18ರಲ್ಲಿ "ಪ್ರವಾದನೆ" ಎಂಬ ಪದವನ್ನು ಗುರುತಿಸಿರಿ. ಪ್ರವಾದನೆ ಹೇಳುವದೆಂದರೆ, ದೇವರ ಪರವಾಗಿ ಮಾತಾಡುವದು.[20] ಅಪೊಸ್ತಲರ ಮಾತುಗಳ ಪ್ರಮುಖ ಅಂಶವೆಂದರೆ, ಅವುಗಳ ಅನೇಕ ಭಾಷೆಗಳಲ್ಲಿ ಅದ್ಭುತವಾಗಿ ಮಾತಾಡಲ್ಪಟ್ಟಿರುವದರಿಂದ ಅಲ್ಲ, ಆದರೆ ಅವು *ದೇವರಿಗಾಗಿ* ಮಾತಾಡಲ್ಪಟ್ಟವುಗಳಾಗಿದ್ದವು! ತಾನು ಮತ್ತು ಇತರ ಅಪೊಸ್ತಲರು ದೇವರಾತ್ಮನ ಪ್ರೇರೇಪಣೆಯಿಂದ ಮಾತಾಡುತ್ತಿದ್ದರೆಂದು ಪೇತ್ರನು ಧೈರ್ಯದಿಂದ ಹೇಳಿದನು!

ಕ್ರಿಸ್ತನು ಮತ್ತು ಆತನ ಪುನರುತ್ಥಾನದ ಕುರಿತು ತನ್ನ ಮಹಾ ಪ್ರಸಂಗವನ್ನು ಪ್ರಾರಂಭಿಸುವದಕ್ಕೆ ಸಿದ್ಧನಾಗಿದ್ದನು. ನಾನು ವಚನಗಳು 22 ಮುಂದರಿಯಲು ಶೋಧನೆ ಯಾಗುತ್ತದೆ, ಆದರೆ ನಾನು ಧ್ವನಿಗಳ ಗುಂಪು, "ವಚನಗಳು 19ರಿಂದ 21ರ ವರೆಗೆ ಅರ್ಥ ವೇನು?" ಹೇಳುವದನ್ನು ಕೇಳುತ್ತೇನೆ.

> "ಕರ್ತನ ಆಗಮನದ ಗಂಭೀರವಾದ ಮಹಾ ದಿನವು ಬರುವದಕ್ಕೆ ಮುಂಚೆ ಮೇಲೆ ಆಕಾಶದಲ್ಲಿ ಅದ್ಭುತಕಾರ್ಯಗಳನ್ನೂ ಕೆಳಗೆ ಭೂಮಿಯಲ್ಲಿ ಸೂಚಕಕಾರ್ಯಗಳನ್ನೂ ಉಂಟುಮಾಡುವೆನು. ರಕ್ತ, ಬೆಂಕಿ, ಹಬೆಯಂತೆ ಏರುವ ಹೊಗೆ, ಇವು ಉಂಟಾಗುವವು. ಸೂರ್ಯನು ಕತ್ತಲಾಗುವನು, ಚಂದ್ರನು ರಕ್ತವಾಗುವನು; ಆದರೂ ಕರ್ತನ ನಾಮವನ್ನು ಹೇಳಿಕೊಳ್ಳುವವರೆಲ್ಲರಿಗೆ ರಕ್ಷಣೆಯಾಗುವದೆಂದು ದೇವರು ಹೇಳುತ್ತಾನೆ ಎಂಬದೇ" (ವಚನಗಳು 19-21).

ಯೋವೇಲನ ಪ್ರವಾದನೆಗೆ ಒಂದು ಸಂಪೂರ್ಣತೆಯನ್ನು ಕೊಡುವದಕ್ಕಾಗಿ ಪೇತ್ರನು ಈ ಮಾತುಗಳನ್ನು ಹೇಳಿರಬಹುದು, ಆದರೆ ಅವನು ಅದನ್ನು ವಿವರಿಸುವ ತೊಂದರೆ ತೆಗೆದುಕೊಳ್ಳಲಿಲ್ಲ. ಪೇತ್ರನ ಸಂದೇಶವನ್ನು ಅರ್ಥ ಮಾಡಿಕೊಳ್ಳಲು ಈ ಮಾತುಗಳ ಅರ್ಥ ಬೇಕಾಗಿಲ್ಲ. ಕುತೂಹಲವುಳ್ಳವರ ಉಪಯೋಗಕ್ಕಾಗಿ, ನಾವು 19 ರಿಂದ 21ರ ವರೆಗಿನ ವಚನಗಳ ಪ್ರವಾದನಾ ಭಾಷೆಯನ್ನು ಅರ್ಥ ಮಾಡಿಕೊಳ್ಳೋಣ.[21] ಈ ರೀತಿ ಯಾದ ಭಾಷೆಯು ನಿಜವಾದ ಅರ್ಥದಲ್ಲಿ ತೆಗೆದುಕೊಳ್ಳತಕ್ಕದ್ದಲ್ಲ; ಅದು ಚಿಹ್ನೆಗಳ ಮೂಲಕ ನಮಗೆ ಕಲಿಸುತ್ತದೆ. ಸೂರ್ಯ ಮತ್ತು ಚಂದ್ರನ ಕುರಿತು ಯೋವೇಲನು ಉಪಯೋಗಿಸಿದ ಪದಗಳು, "ದೇವರು ಕೆಲವು ಸಂಧರ್ಭಗಳಲ್ಲಿ ಆಶೀರ್ವದಿಸಲು ಅಥವಾ ಶಪಿಸಲು ಒಂದು ವಿಶಿಷ್ಟ ರೀತಿಯಲ್ಲಿ ವರ್ತಿಸುತ್ತಾನೆ" ಎಂದು ಹೇಳಲು ಹಳೆ ಒಡಂಬಡಿಕೆಯಲ್ಲಿ ಅನೇಕ ಕಡೆಗಳಲ್ಲಿ ಉಪಯೋಗಿ ಸಲಾಗಿದೆ.[22] (ನೋಡಿರಿ ಯೆಶಾಯ 13:6, 10, 11; ಯೆಹೆಜ್ಕೇಲ 32:2, 7, 8; ಆಮೋಸ 5:18, 20). ಜಗತ್ತಿನ ಅಂತ್ಯವನ್ನು ಸೂಚಿಸುವದಕ್ಕೆ ಈ ಮಾತುಗಳನ್ನು ಉಪಯೋಗಿಸಬಹುದು.[23] (ಅಂಥ ಸಂಧರ್ಭಗಳಲ್ಲಿ ದೇವರು ಖಂಡಿತವಾ ಗಿಯೂ ವಿಶೇಷವಾದ ರೀತಿಯಿಂದ ಆಶೀರ್ವದಿಸುವದಕ್ಕೂ ಅಥವಾ ಶಪಿಸುವದಕ್ಕೂ ಕಾರ್ಯ ಮಾಡುತ್ತಾನೆ!) ಆದರೆ ಹೆಚ್ಚಾಗಿ ಅದು ದೇವರ ಯೋಜನೆ ಮತ್ತು ಉದ್ದೇಶದ ಪರಕಾಷ್ಠೆಯ

ಕ್ಷಣಗಳನ್ನು ಸೂಚಿಸುತ್ತದೆ.

ಈ ಆಲೋಚನೆಗಳನ್ನು ನಮ್ಮ ಮನಸ್ಸಿನಲ್ಲಿ ಇಟ್ಟುಕೊಂಡು, ನಾವು, "19ರಿಂದ 21 ವರೆಗಿನ ವಚನಗಳಲ್ಲಿನ ಯೋವೇಲನ ಮಾತುಗಳು ಯಾವ ಘಟನೆಯನ್ನು ಸೂಚಿಸುತ್ತವೆ?"[24] ಎಂದು ಆಶ್ಚರ್ಯ ಪಡುತ್ತೇವೆ. ಅದು ಕ್ರಿಸ್ತನು ಬಂದು ಈ ಲೋಕವು *ಅಂತ್ಯವಾಗುವ* ಅಂತ್ಯ ಕಾಲವನ್ನು ಸೂಚಿಸುತ್ತದೆ ಎಂದು ಅನೇಕರು ಆಲೋಚಿಸುತ್ತಾರೆ.[25] ಇದು ನಿಜವಿರಬಹುದು, ಆದರೆ ಈ ವಿವರಣೆಯಿಂದ ನನಗೆ ಸ್ವಲ್ಪ ತೊಂದರೆ ಇದೆ: ವಚನ 21 ವಚನ 19 ಮತ್ತು 20ರ ತರುವಾಯ ಬರುವಂಥದ್ದು: "ಆದರೂ ಕರ್ತನ ನಾಮವನ್ನು ಹೇಳಿಕೊಳ್ಳುವವರೆಲ್ಲರಿಗೆ ರಕ್ಷಣೆಯಾಗುವದೆಂದು ದೇವರು ಹೇಳುತ್ತಾನೆ ಎಂಬದೇ." ಕ್ರಿಸ್ತನು ಬರುವಾಗ, ಆತನ ನಾಮವನ್ನು ಹೇಳಿಕೊಂಡು ರಕ್ಷಣೆ ಹೊಂದುವದು ಬಹು ತಡವಾಗುತ್ತದೆ. ನನ್ನ ಅಭಿಪ್ರಾಯವು ಏನೆಂದರೆ, ವಚನ 19 ಮತ್ತು 20 ಪಂಚಾಶತ್ತಮ *ದಿನವನ್ನು ಸೂಚಿಸುತ್ತದೆ,* ದೇವರು ಸಭೆಯನ್ನು ಅಸ್ತಿತ್ವಕ್ಕೆ ತಂದ ಮತ್ತು ಮೊದಲ ಸುವಾರ್ತಾ ಪ್ರಸಂಗ ಬೋಧಿಸಲ್ಪಟ್ಟ ಆ ಅದ್ಭುತ ಕ್ಷಣ.[26] (ಪ್ರಸಂಗದ ಅಂತ್ಯದಲ್ಲಿ ಪೇತ್ರನು "ಕರ್ತನ ನಾಮದಲ್ಲಿ ಹೇಗೆ ಹೇಳಿಕೊಳ್ಳುವದು" ಎಂದು ವಿವರಿಸಿದನು[27].)

## ಯೇಸುವಿನ ವ್ಯಕ್ತಿತ್ವ (2:22-24)

ಅವರು ಏನು ತಿಳುಕೊಳ್ಳ *ಬೇಕಾಗಿತ್ತೋ* ಅದನ್ನು ಪೇತ್ರನು ಹೇಳಿದ ತರುವಾಯ (ಅವರು ಕೇಳುತ್ತಿದ್ದ ನೋಡುತ್ತಿದ್ದ ಸಂಗತಿಗಳ ವಿವರಣೆ), ಅವನು ಅವರಿಗೆ ಇನ್ನೂ ಏನು *ತಿಳುಕೊಳ್ಳಬೇಕಿತ್ತೋ* ಅದನ್ನು ಹೇಳಿದನು. ಯೇಸುವಿನ ಕುರಿತು ಹೇಳುವಾಗ ಅವನ ಮುಖ ಗಂಭೀರವಾದದ್ದನ್ನು ನಾನು ಊಹಿಸಬಲ್ಲೆನು: "ಇಸ್ರಾಯೇಲ ಜನರೇ, ನನ್ನ ಮಾತುಗಳನ್ನು ಲಾಲಿಸಿರಿ - ನಜರೇತಿನ[28] ಯೇಸು ಇದ್ದನಲ್ಲಾ, KJV; NIV ದೇವರು ನಿಮಗೂ ತಿಳಿದಿರುವಂತೆ ಆತನ ಕೈಯಿಂದ ಮಹತ್ತುಗಳನ್ನೂ ಅದ್ಭುತಗಳನ್ನೂ ಸೂಚಕಕಾರ್ಯಗಳನ್ನೂ[29] ನಮ್ಮಲ್ಲಿ ನಡಿಸಿ ಆತನನ್ನು ತನಗೆ ಮೆಚ್ಚಿಕೆಯಾದವನೆಂದು ನಿಮಗೆ ತೋರಿಸಿಕೊಟ್ಟನು" (ವಚನ 22). ಯೇಸು ಮಾಡಿದ ಕಾರ್ಯಗಳು "ಮೂಲೆಯಲ್ಲಿ ಮಾಡಿದ ಕಾರ್ಯಗಳಲ್ಲ" (26:26); ಆತನು ಮಹಾ ಅದ್ಭುತ ಕಾರ್ಯಗಳನ್ನು ಮಾಡಿದ್ದನೆನ್ನುವ ವಿಷಯ ಸಾಮಾನ್ಯವಾಗಿತ್ತು (ಯೋಹಾನ 9:16; 12:37).[30] ಯೇಸು ಈ ಲೋಕದಲ್ಲಿದ್ದಾಗ ನಿಕೋದೇಮನು ಹೇಳಿದ ಅಂಶವನ್ನೇ ಪೇತ್ರನು ಹೇಳಿದನು: ಯೇಸು ಮಾಡಿದ ಸೂಚಕಾರ್ಯಗಳನ್ನು "ದೇವರ ಸಹಾಯವಿಲ್ಲದೆ ಯಾರೂ ಮಾಡಲು ಸಾಧ್ಯವಿಲ್ಲ" (ಯೋಹಾನ 3:2)!

ಪೇತ್ರನು "ನಿಮ್ಮಲ್ಲಿ" ಎಂದು ಹೇಳುವಾಗ ಬಹುಶಃ ಅವನು ಪಾಲೇಸ್ತೀನಿನಲ್ಲಿ ಮನೆ ಮಾಡಿಕೊಂಡಿದ್ದವರನ್ನು ತೋರಿಸಿರಬಹುದು, ಆದರೆ "ನಿಮಗೂ ತಿಳಿದಿರುವಂತೆ" ಎಂದು ಹೇಳುವಾಗ, ತನ್ನ ಕೈಗಳನ್ನು ಅಗಲವಾಗಿ ಚಾಚಿರಬಹುದು. ಕಳೆದ ಐವತ್ತು ದಿನಗಳಿಂದ, ಯೆರೂಸಲೇಮಿನಲ್ಲಿ ಬಿಸಿ ಸುದ್ದಿಯು ನಜರೇತಿನ ಯೇಸುವಿನ ಕುರಿತಾಗಿತ್ತು - ಆತನ ಜೀವನ, ಆತನ ಕ್ರೂಜೆಯ ಮರಣ (ಲೂಕ 24:18), ಆತನ ದೇಹವನ್ನಿಟ್ಟಿದ್ದ ಖಾಲಿಯಾದ ಸಮಾಧಿ[31] ಮತ್ತು ಆತನ ದೇಹವು ಏನಾಯಿತೆಂಬ ಸುದ್ದಿಗಳು (ಮತ್ತಾಯ 28:11-15). ಪಾಲೇಸ್ತಿನನಲ್ಲಿರದಿದ್ದರೂ ಅಲ್ಲಿ ಉಪಸ್ಥಿತರಿದ್ದ ಪ್ರತಿಯೊಬ್ಬರೂ, ಯೇಸುವಿನ ನಾಮದ[32] ಮತ್ತು ಆತನು ಮಾಡಿದ ದಾಖಲೆಗೊಂಡ ಅದ್ಭತಕಾರ್ಯಗಳ ಕುರಿತು ಪರಿಚಿತರಾಗಿದ್ದರು.

ಅವರು ಅರಿಯದ ಇನ್ನೊಂದು ಸಂಗತಿಯನ್ನು ಪೇತ್ರನು ಹೇಳಿದನು: "ಆ ಯೇಸು ದೇವರ ಸ್ಥಿರಸಂಕಲ್ಪಕ್ಕೂ ಭವಿಷ್ಯದ್‌ಜ್ಞಾನಕ್ಕೂ ಅನುಸಾರವಾಗಿ ಒಪ್ಪಿಸಲ್ಪಟ್ಟಿರಲು ನೀವು ಅನ್ಯಜನರ ಕೈಯಿಂದ ಆತನನ್ನು ಶಿಲುಬೆಗೆ[33] ಹಾಕಿಸಿ ಕೊಂದಿರಿ" (ವಚನ 23). [ಉದಾಹರಣೆ., ರೋಮಾ ಸೈನಿಕರು[34]] ಪೇತ್ರನ ಕೊನೆಯ ಹೇಳಿಕೆಗಳ ಕುರಿತು ಅವರಿಗೆ ವ್ಯಸನವಿತ್ತು. ಜನರ ಗುಂಪಾಗಿ ಅವರು ಯೇಸುವನ್ನು ತಿರಸ್ಕರಿಸಿ ಆತನ ಮರಣವನ್ನು ಹಕ್ಕಿನಿಂದ ಕೇಳಿದ್ದರು.

ಆದರೆ ಅವನು ಹೇಳಿದ ಮೊದಲ ವಿವರಣೆಯು ಗಾಬರಿಗೊಳಿಸುವ ಪ್ರಕಟನೆಯಾಗಿತ್ತು: "ದೇವರ ಸ್ಥಿರಸಂಕಲ್ಪಕ್ಕೂ ಭವಿಷ್ಯದ್‌ಜ್ಞಾನಕ್ಕೂ"![35]

ಯೇಸುವನ್ನು ಮೆಸ್ಸಿಯನೆಂದು ಯೆಹೂದ್ಯರು ಸ್ವೀಕರಿಸುವದಕ್ಕೆ ಇದ್ದ ಒಂದು ದೊಡ್ಡ ಅಡ್ಡಿಯೇನೆಂದರೆ, ಆತನು ರೋಮದ ಕ್ರೂಜೆಯ ಮೇಲೆ ಮರಣ ಹೊಂದಿದ್ದು.[36] ಮೋಶೆಯು, "ಮರದ ಮೇಲೆ ತೂಗುವವನು ಶಾಪಗ್ರಸ್ತನು" ಎಂದು ಹೇಳಿದ್ದನು (ಗಲಾತ್ಯ 3:13; ಧರ್ಮೋಪದೇಶಕಾಂಡ 21:23). ಯೆಹೂದ್ಯರ ಮನಸ್ಸಿನಲ್ಲಿ, ಮೆಸ್ಸಿಯನ ಮಹಿಮೆಯೊಡನೆಯೂ ಮತ್ತು ಬಲದಿಂದಲೂ ಬರುವನು ಎಂದಿತ್ತು. ಆತನು ಬಡತನದಲ್ಲಿ ಬರಲು ಸಾಧ್ಯವಿಲ್ಲ, ಒಬ್ಬ ಸೇವಕನಾಗಿ ಜೀವಿಸಲೂ ಮತ್ತು ಒಬ್ಬ ಅಪರಾಧಿಯಾಗಿ ಸಾಯಲೂ ಸಾಧ್ಯವಿಲ್ಲ. ಪೌಲನು ಕ್ರೂಜೆಯನ್ನು ಕುರಿತು ಅದು ಯೆಹೂದ್ಯರಿಗೆ "ಎಡವುವ ಕಲ್ಲು" ಎಂದು ಹೇಳಿದ್ದರಲ್ಲಿ ಯಾವ ಆಶ್ಚರ್ಯವಿಲ್ಲ (1 ಕೊರಿಂಥ 1:23).

ಕ್ರೂಜೆಯು ಮೆಸ್ಸಿಯನೆಂದು ಯೇಸುವಿನ ಹಕ್ಕನ್ನು *ಅನೂರ್ಜಿತಗೊಳಿಸಲಿಲ್ಲ*, ಆದರೆ ಅದನ್ನು ಸಾಧಿಸಿತು/*ಊರ್ಜಿತಗೊಳಿಸಿತು* ಎಂದು ಪೇತ್ರನು ಸಾರಿದನು - ಯಾಕೆಂದರೆ ಕ್ರೂಜೆಯು *ಸರ್ವಕಾಲಕ್ಕೂ* ದೇವರ ಯೋಜನೆಯ ಭಾಗವಾಗಿತ್ತು! ಪೇತ್ರನು ಈ ವಿಚಾರವನ್ನು ಇನ್ನೂ ಹೆಚ್ಚು ಒತ್ತು ಕೊಟ್ಟು ಹೇಳುವದಕ್ಕೆ ಬಾಧಾನುಭವಿ ಸೇವಕನ ಕುರಿತ ಹಳೆ ಒಡಂಬಡಿಕೆಯ ಪ್ರವಾದನೆಗಳನ್ನು ಹೇಳಿದನು, ಉದಾಹರಣೆಗೆ, ಯೆಶಾಯ 53 ಮತ್ತು ಕೀರ್ತನೆ 22.[37]

ಪೇತ್ರನು ತನ್ನ ಬೆರಗುಗೊಳಿಸುವ ಮಾತುಗಳನ್ನು ಮುಗಿಸಲಿಲ್ಲ. ಯೇಸುವಿನ ಕುರಿತ ಮುಂದಿನ ಅಂಶವು ಎಲ್ಲಕಿಂತ ಹೆಚ್ಚು ಆಶ್ಚರ್ಯಗೊಳಿಸುವಂಥದ್ದಾಗಿತ್ತು: "*ಆತನನ್ನು ದೇವರು ಮರಣವೇದನೆಗಳಿಂದ ಬಿಡಿಸಿ ಎಬ್ಬಿಸಿದನು*; ಯಾಕಂದರೆ ಮರಣವು ಆತನನ್ನು ಹಿಡುಕೊಂಡಿರುವದು ಅಸಾಧ್ಯವಾಗಿತ್ತು" (ವಚನ 24; ಒತ್ತಿ ಹೇಳಿದ್ದು ನನ್ನದು). ಪಸ್ಕ ಮತ್ತು ಪಂಚಾಶತ್ತಮ ಹಬ್ಬದ ಮಧ್ಯದ ಸಮಯದಲ್ಲಿ, ಕುತೂಹಲದಿಂದ ತುಂಬಿದ ಯೆಹೂದ್ಯರು ಬಹುಶಃ ಅರಿಮತ್ತಾಯದ ಯೋಸೇಫನ ಖಾಲಿಯಾದ ಸಮಾಧಿಗೆ ಹೋಗಿ ಕತ್ತಲಲ್ಲಿ ಇಣುಕಿ ನೋಡಿರಬಹುದು. "ದೇಹವು ಏನಾಯಿತು?"[38] ಎಂದು ಬಹು ಜನರು ಬಹುಶಃ ಪ್ರಶ್ನಿಸುತ್ತಿದ್ದರು. ಊಹಾಪೋಹಗಳು ಹಬ್ಬತೊಡಗಿರಬಹುದು. "ನಜರೇತಿನ ಯೇಸು ಸತ್ತವರೊಳಗಿಂದ ಎದ್ದದ್ದನ್ನು ನೋಡಿದ್ದೇನೆಂದು ಹೇಳಿಕೊಳ್ಳುವ ಮನುಷ್ಯನನ್ನು ನಾನು ಬಲ್ಲೆನು!" ಪೇತ್ರನು ಎಲ್ಲ ಮಾತಾಡಲ್ಪಟ್ಟ ಮತ್ತು ಮಾತಾಡಲಾರದ ಪ್ರಶ್ನೆಗಳನ್ನು ಉತ್ತರಿಸಿದನು. ಯೇಸುವಿಗೆ ಮರಣ ದಂಡನೆ ಕೊಡಲ್ಪಟ್ಟಿತ್ತು, ಆದರೆ ದೇವರು ಆ ತೀರ್ಪನ್ನು ತಿರುವು ಮಾಡಿದ್ದನು! "ದೇವರು ಆತನನ್ನು ಎಬ್ಬಿಸಿದನು"!

ಪುನರುತ್ಥಾನವನ್ನು ಸಾರುವದರಲ್ಲಿ, ಪೇತ್ರನು ಒಂದು ಅಲಂಕಾರಿಕ ಭಾಷೆಯನ್ನು ಉಪಯೋಗಿಸಿದನು, ಅದು ಆಂಗ್ಲ ಭಾಷಾಂತರಗಳಲ್ಲಿ ಕಳೆದುಹೋಗಿದೆ. "ಮರಣ ವೇದನೆಗಳಿಂದ ಬಿಡಿಸಿ" ದೇವರು ಯೇಸುವನ್ನು ಎಬ್ಬಿಸಿದನೆಂದು ಪೇತ್ರನು ಅಕ್ಷರಶಃ ಹೇಳುತ್ತಾನೆ.[39] "ವೇದನೆ" ಎಂಬ ಪದವನ್ನು ಗ್ರೀಕರು "ಪ್ರಸವ ವೇದನೆ" ಎಂಬ ಅರ್ಥದಲ್ಲಿ ಉಪಯೋಗಿಸುತ್ತಾರೆ. ಪೇತ್ರನು ಸಮಾಧಿಯಲ್ಲಿದ್ದ ಯೇಸುವನ್ನು ಉದರದಲ್ಲಿರುವ ಮಗುವಿಗೆ ಹೋಲಿಸಿದ್ದಾನೆ. ತಾಯಿಯು ಸಿದ್ಧವಾಗಿದ್ದಳೊ ಇಲ್ಲವೋ, ತನ್ನ ಸಮಯವಾದ ಕೂಡಲೇ ಒಂದು ಮಗುವು ಜನಿಸುತ್ತದೆ![40] ಹಾಗೆಯೇ, ಸಮಾಧಿಯಿಂದ ಹೊರ ಬರುವದಕ್ಕೆ ಸಮಯ ವಾದಾಗ, "ಮರಣವು ಅವನನ್ನು ಹಿಡುಕೊಂಡಿರುವದು ಅಸಾಧ್ಯವಾಗಿತು"!

"ದೇವರು ಆತನನ್ನು ಎಬ್ಬಿಸಿದನು"! ಎನ್ನುವ ಮಾತು ಎಷ್ಟು ಉತ್ಸಾಹಕಾರಿಯಾಗಿದೆ. ಈ ಮಾತುಗಳು ಕ್ರೈಸ್ತತ್ವದ ಹೃದಯ ಬಡಿತವಾಗಿದೆ. ಪುನರುತ್ಥಾನವು ಹೊಸ ಒಡಂಬಡಿಕೆಯಲ್ಲಿ ಸುಮಾರು ನೂರು ಬಾರಿ ನಮೂದಿಸಲಾಗಿದೆ! ಎಲ್ಲಕ್ಕಿಂತ ಮಿಗಿಲಾಗಿ, ಅಪೊಸ್ತಲರು ಪುನರುತ್ಥಾನದ ಸಾಕ್ಷಿಗಳಾಗಿದ್ದರು (1:22). ಅವರು ಧೈರ್ಯದಿಂದ "... ಸತ್ತ ಮೇಲೆ

ಜೀವಿತನಾಗಿ ಎದ್ದು ಬಂದ ಮಹತ್ಕಾರ್ಯದಿಂದ ದೇವ ಕುಮಾರನೆಂದು ನಿರ್ಣಯಿಸಲ್ಪಟ್ಟವನೂ ಆಗಿದ್ದಾನೆ" ಎಂದು ಸಾರಿದರು (ರೋಮಾಪುರ 1:4). ಅವರ ಧ್ವನಿಗೆ ಬಲವನ್ನೂ, ಅವರ ಹೃದಯಕ್ಕೆ ಧೈರ್ಯವನ್ನೂ ಮತ್ತು ಅವರ ಕಾಲುಗಳಿಗೆ ರೆಕ್ಕೆಗಳನ್ನೂ ಪುನರುತ್ಥಾನವು ಕೊಟ್ಟಿತು. ಅಪೊಸ್ತಲರು ಸತ್ತ ರಕ್ಷಕನಲ್ಲಿ ನಂಬಿಕೆ ಇಡಲಿಲ್ಲ, ಆದರೆ ಅವರಿಗೆ ಸಹಾಯ ಮಾಡುತ್ತಾ ಮತ್ತು ಬಲಪಡಿಸಿದ (ಮತ್ತಾಯ 28:20). ಜೀವಿಸುವ ಬಿಡುಗಡೆಗೊಳಿಸುವಾತನಲ್ಲಿ. ಪ್ರತಿ ದಿನ ಅವರು ಒಬ್ಬ ಪುನರುತ್ಥಾನವಾದ ಕರ್ತನಿಗೋಸ್ಕರ ತಮ್ಮ ಜೀವವನ್ನು ಅಪಾಯಕ್ಕೊಳಪಡಿಸಿದರು![41]

## ದಾವೀದನ ಪ್ರವಾದನೆ (2:25-31)

"ದೇವರು ಆತನನ್ನು ಎಬ್ಬಿಸಿದನು" ಎಂದು ಪೇತ್ರನು ಹೇಳಿದಾಗ, ಅದನ್ನು ಕೇಳಿದ ಪ್ರತಿಯೊಬ್ಬನೂ "ಇದು ಸತ್ಯವೋ?" ಎಂದು ಆಶ್ಚರಿ ವ್ಯಕ್ತಪಡಿಸಿರಬಹುದು.

ಎಲ್ಲವೂ ಆ ಪ್ರಶ್ನೆಯ ಮೇಲೆ ನಿಂತಿತ್ತು. ಪುರುತ್ಥಾನವನ್ನು ಸಿದ್ಧಮಾಡಲು, ಪೇತ್ರನು ಅದು ಮುಂತಿಳಿಸಲ್ಪಟ್ಟಿತ್ತೆಂದು ತೋರಿಸುವದರ ಮೂಲಕ ಪ್ರಾರಂಭಿಸಿದನು.[42] ನಿರ್ದಿಷ್ಟವಾಗಿ ಅವನು ಕೀರ್ತನೆ 16:[43] ರಿಂದ ಹೇಳಿದನು. "ಆತನ ವಿಷಯದಲ್ಲಿ ದಾವೀದನು - ಕರ್ತನು ಯಾವಾಗಲೂ ನನ್ನೆದುರಿನಲ್ಲಿರುವದನ್ನು ನೋಡುತ್ತಿದ್ದೆನು. ನಾನು ಕದಲದಂತೆ ಆತನು ನನ್ನ ಬಲಗಡೆಯಲ್ಲಿಯೇ ಇದ್ದಾನೆ" (ವಚನ 25). ದಾವೀದನ ಹೆಸರನ್ನು ಕೇಳಿ ಯೆಹೂದ್ಯರು ಲಕ್ಷ್ಯಕೊಟ್ಟಿರಬೇಕು. "ಇಸ್ರಾಯೇಲಿನ ಸುಂದರ ಕೀರ್ತನೆಗಾರನು" ಯಾವಾಗಲೂ ಇಸ್ರಾಯೇಲ ಜನರಿಗೆ ಮೆಚ್ಚಿನವನಾಗಿದ್ದನು (2 ಸಮುವೇಲ 23:1). ಮೆಸ್ಸಿಯನು ದಾವೀದನ ವಂಶದವನು ಮತ್ತು ದಾವೀದನ ಸಿಂಹಾಸನಕ್ಕೆ ಬಾಧ್ಯಸ್ತನ ಎಂದು ಅವರು ನಂಬಿದ್ದರು.

ಪೇತ್ರನು ತನ್ನ ಪುರಾವೆಗಳನ್ನು ದಾವೀದನ ಕೀರ್ತನೆ 16ರ ಮಾತುಗಳಿಂದಲೇ ಮುಂದುವರಿಸಿದನು:

> "ಆದಕಾರಣ ನನ್ನ ಹೃದಯವು ಹರ್ಷಿಸಿತು; ನನ್ನ ನಾಲಿಗೆಯು ಉಲ್ಲಾಸಧ್ವನಿಯನ್ನು ಮಾಡಿತು. ನನ್ನ ಶರೀರವೂ ನಿರೀಕ್ಷೆಯಿಂದ ನೆಲೆಯಾಗಿರುವದು; ಯಾಕಂದರೆ ನೀನು ನನ್ನ ಜೀವಾತ್ಮವನ್ನು[44] ಪಾತಾಳದಲ್ಲಿ ಬಿಡುವದಿಲ್ಲ,[45] ನಿನ್ನ ಪ್ರಿಯನಿಗೆ ಕೊಳೆಯುವ ಅವಸ್ಥೆಯನ್ನು ನೋಡಗೊಡಿಸುವದಿಲ್ಲ. ಜೀವಮಾರ್ಗಗಳನ್ನು ನನಗೆ ತಿಳಿಯಪಡಿಸಿದ್ದೀ; ನಿನ್ನ ಸಮ್ಮುಖದಲ್ಲಿ ನನ್ನನ್ನು ಆನಂದಭರಿತ ನಾಗಮಾಡುವಿ ಎಂದು ಹೇಳಿದ್ದಾನೆ" (ವಚನಗಳು 26-28).

"ಯಾಕೆಂದರೆ ನೀನು ನನ್ನ ಜೀವಾತ್ಮವನ್ನು ಪಾತಾಳದಲ್ಲಿ ಬಿಡುವದಿಲ್ಲ ನಿನ್ನ ಪ್ರಿಯನಿಗೆ ಅಧೋಲೋಕವನ್ನು ನೋಡಗೊಡಿಸುವದಿಲ್ಲ" ಎನ್ನುವ ಮಾತು ಮುಖ್ಯ ಪದಗಳಾಗಿವೆ. ಈ ಕೀರ್ತನೆಯಲ್ಲಿ ದಾವೀದನು ಪ್ರಥಮ ವ್ಯಕ್ತಿಯಲ್ಲಿ ಮಾತಾಡಿದ್ದಾನೆ; ಆದುದರಿಂದ ಅವನು ತನ್ನ ವಿಷಯದಲ್ಲಿಯೇ ಮಾತಾಡಿದ್ದಾನೆಂದು ತೋರುತ್ತದೆ. ದಾವೀದನು ಮತ್ತು ಅವನ ಬಾಧ್ಯಸ್ತನ ಮಧ್ಯ ಹತ್ತಿರದ ಸಂಬಂಧವಿತ್ತೆಂದರೆ, ದಾವೀದನು ಯಾವಾಗಲು ಮೆಸ್ಸಿಯನ ಕುರಿತು ಮಾತಾಡುವಾಗ ಪ್ರಥಮ ವ್ಯಕ್ತಿಯಲ್ಲಿ ಮಾತಾಡುತ್ತಿದ್ದನೆಂದು ಯೆಹೂದ್ಯರು ಅರ್ಥಮಾಡಿಕೊಂಡಿದ್ದರು. ಕೀರ್ತನೆ 16ರಲ್ಲಿ ದಾವೀದನು ತನಗೋ ಅಥವಾ ಮೆಸ್ಸಿಯನನ್ನು ಕುರಿತು ಮಾತಾಡಿದನೋ ಎನ್ನುವದು ಪ್ರಶ್ನೆಯಾಗಿತ್ತು.

ದಾವೀದನು ತನ್ನ ಕುರಿತು ಮಾತಾಡುವಾಗ "ಪವಿತ್ರನು" ಎಂದು ಉಪಯೋಗಿಸುವದಿಲ್ಲವೆಂದು ಪೇತ್ರನು ವಾಗ್ವದ ಮಾಡಬಹುದಾಗಿತ್ತು, ಆದರಲ್ಲೂ ವಿಶೇಷವಾಗಿ ಬತ್ಸಬೆಯೊಂದಿಗೆ ವ್ಯಭಿಚಾರ ಮಾಡಿದ ತರುವಾಯ. ಆದರೆ, ಪೇತ್ರನು ಇನ್ನೊಂದು ರೀತಿಯಲ್ಲಿ ವಾದಿಸಿದನು:

"ಸಹೋದರರೇ, ಮೂಲಪಿತೃವಾದ[46] ದಾವೀದನ ವಿಷಯದಲ್ಲಿ ನಾನು ಧೈರ್ಯದಿಂದ ನಿಮ್ಮ ಸಂಗಡ ಮಾತಾಡಬಹುದು ಏನಂದರೆ - ಅವನು ತೀರಿಹೋಗಿ ಹೂಣಲ್ಪಟ್ಟನು; ಅವನ, ಸಮಾಧಿ ಈ ದಿನದ ವರೆಗೂ ನಮ್ಮಲ್ಲಿ ಅದೆ" (ವಚನ 29). ದಾವೀದನ ಸಮಾಧಿಯು ಯೆರೂಸಲೇಮಿನಲ್ಲಿರುವ ಸರ್ವರಿಗೆ ಪರಿಚಿತವಾಗಿತ್ತು. ಅದು ಪಟ್ಟನದಲ್ಲಿಯೇ ಇತ್ತು,[47] ಮತ್ತು ಅನೇಕರು ಅದರ ಎದುರು ಹಾದು ಹೋಗುತ್ತಿದ್ದರು. ದಾವೀದನು ಎಬ್ಬಿಸಲ್ಪಟ್ಟಿಲ್ಲವೆನ್ನುವದು ಸ್ಪಷ್ಟವಾಗಿತ್ತು, ಆದುದರಿಂದ ಅವನು ತನ್ನ ಕುರಿತು ಕೀರ್ತನೆ 16ರಲ್ಲಿ ಮಾತಾಡಲು ಸಾಧ್ಯವಿಲ್ಲ. ಈ ಮಾತುಗಳ ತನ್ನ ವಿಷಯದಲ್ಲಿ ಇರದಿದ್ದರೇ, ಅದು ಮೆಸ್ಸಿಯನ ಕುರಿತಾಗಿರಲೇ ಬೇಕು,

> ಅವನು ಪ್ರವಾದಿಯಾಗಿದ್ದು ನಿನ್ನ ಸಂತತಿಯವರೊಳಗೆ[48] ಒಬ್ಬನನ್ನು ನಾನು ನಿನ್ನ ಸಿಂಹಾಸನದ ಮೇಲೆ ಕುಳ್ಳಿರಿಸುವೆನೆಂದು ತನಗೆ ದೇವರು ಆಣೆಯಿಟ್ಟು ಹೇಳಿದ್ದನ್ನು ಬಲ್ಲವನಾಗಿ ಮುಂದಾಗುವದನ್ನು ಕಂಡು ಕ್ರಿಸ್ತನ[50] ಪುನರುತ್ಥಾನವನ್ನೇ ಕುರಿತು ಆತನು ಪಾತಾಳದಲ್ಲಿ ಬಿಡಲ್ಪಡಲಿಲ್ಲವೆಂತಲೂ ಆತನ ಶರೀರವು ಕೊಳೆಯುವ ಅವಸ್ಥೆಯನ್ನನು ಭವಿಸುವದಿಲ್ಲವೆಂತಲೂ ಹೇಳಿದನು (ವಚನಗಳು 30, 31).[51]

ಕ್ರಿಸ್ತನು ಸಮಾಧಿಯಲ್ಲಿ ಉಳಿಯುವದಿಲ್ಲವೆಂದು ದಾವೀದನು ಪ್ರವಾದಿಸಿದ್ದನು ಎಂದು ಪೇತ್ರನು ಸಾಭೀತು ಪಡಿಸಿದನು. ಸತ್ತವರೊಳಗಿಂದ ಪುನರುತ್ಥಾನವಾದದ್ದು ಸತ್ಯವಾಗಿತ್ತು!

ದಾವೀದನ ಪ್ರವಾದನೆಯು *ಯೇಸುವನ್ನೇ* ಸೂಚಿಸುತ್ತದೆ ಎಂದು ವಿವರಿಸುವದಕ್ಕೆ ಪೇತ್ರನು ಸಿದ್ಧನಾಗುತ್ತಿದ್ದನು. ಇದನ್ನು ಮೊದಲೇ ನಿರೀಕ್ಷಿಸಿ, ಸಮಾಧಿಯಲ್ಲಿ[52] ಮೂರು ದಿನ ಯೇಸುವಿನ ದೇಹದ ಕುರಿತು ವಚನಗಳು 27 ಮತ್ತು 31 ಏನು ಹೇಳುತ್ತದೆ ಎಂದು ಗಮನಿಸಿರಿ: "ಯಾಕೆಂದರೆ ನೀನು ನನ್ನ ಜೀವಾತ್ಮವನ್ನು ಪಾತಾಳದಲ್ಲಿ ಬಿಡುವದಿಲ್ಲ, ನಿನ್ನ ಪ್ರಿಯನಿಗೆ ಕೊಳೆಯುವ ಅವಸ್ಥೆಯನ್ನು ನೋಡಗೊಡಿಸುವದಿಲ್ಲ"[53] "ಮುಂದಾಗುವದನ್ನು ಕಂಡು ಕ್ರಿಸ್ತನ ಪುನರುತ್ಥಾನವನ್ನೇ ಕುರಿತು ಆತನು ಪಾತಾಳದಲ್ಲಿ ಬಿಡಲ್ಪಡಲಿಲ್ಲವೆಂತಲೂ ಆತನ ಶರೀರವು ಕೊಳೆಯುವ ಅವಸ್ಥೆಯನ್ನನು ಭವಿಸುವದಿಲ್ಲವೆಂತಲೂ ಹೇಳಿದನು." ಯೇಸು ಕ್ರೂಜೆಯ ಮೇಲಿದ್ದಾಗ, ಪಶ್ಚಾತಾಪ ಪಟ್ಟ ಕಳ್ಳನಿಗೆ ಏನು ಹೇಳಿದನೋ ಗಮನಿಸಿರಿ, "ಈ ಹೊತ್ತು ನೀನು ನನ್ನ ಸಂಗಡ ಪರದೈಸಿನಲ್ಲಿರುವಿ" (ಲೂಕ 23:43). "ಪರದೈಸು," ಇದು ಪರಲೋಕವನ್ನು ಸೂಚಿಸುತ್ತದೆ ಎಂದು ನಾವು ಆಲೋಚಿಸಬಹುದು, ಆದರೆ ಆತನ ಪುನರುತ್ಥಾನದ ತರುವಾಯ, ಯೇಸು ಹೇಳಿದ್ದು, "ನಾನು ಇನ್ನೂ ಪರಲೋಕಕ್ಕೆ ತಂದೆಯ ಬಳಿಗೆ ಹೋಗಿಲ್ಲ" (ಯೋಹಾನ 20:17). ಅಪೊಸ್ತಲರ ಕೃತ್ಯಗಳು 2:27, 31, ಯೇಸು ಮತ್ತು ಕಳ್ಳನು "ಪರದೈಸಿಗೆ" ಹೋದಾಗ ಎಲ್ಲಿದ್ದರು ಎಂದು ತಿಳಿಸುತ್ತದೆ: ಯೇಸುವಿನ ದೇಹವನ್ನು ಸಮಾಧಿಯಲ್ಲಿ ಇಟ್ಟರು, ಆದರೆ ಆತನ ಆತ್ಮವು ಹೇಡಿಸ್‌ಗೆ ತೆರಳಿತು. "ಹೇಡಿಸ್" ಎನ್ನುವ ಪದದ ಅರ್ಥ ಅಕ್ಷರಶಃ "ಕಾಣದಿರುವ"; ಅದು "ಕಾಣದಿರುವ ಲೋಕವನ್ನು ಸೂಚಿಸುತ್ತದೆ," ದೇಹವನ್ನು ಬಿಟ್ಟ ಆತ್ಮವು ನ್ಯಾಯ ತೀರ್ಪಿಕೆಗಾಗಿ ಕಾಯುವ ಸ್ಥಳ. ಆದುದರಿಂದ "ಪರದೈಸು" ಹೇಡಿಸ್‌ನ ಒಂದು ಭಾಗವನ್ನು ಸೂಚಿಸುತ್ತದೆ, ಅಲ್ಲಿ ನ್ಯಾಯ ತೀರ್ಪಿಕೆಯ ವರೆಗೆ ನೀತಿವಂತರು ವಿಶ್ರಮಿಸಿಕೊಳ್ಳುವರು (ಭಿಕ್ಷುಕ ಲಾಜರನು ಸತ್ತ ನಂತರ ಹೋದ ಸ್ಥಳ [ಹೋಲಿಸು ಲೂಕ 16:22]). ಯೇಸುವಿನ ಆತ್ಮವು ಮತ್ತು ಪಶ್ಚಾತಾಪ ಪಟ್ಟ ಕಳ್ಳನ ಆತ್ಮವು ಅವರು ಮರಣಹೊಂದಿದ ತರುವಾಯ ಇಲ್ಲಿಗೆ ಹೋಯಿತು.

ನೀನು ಮತ್ತು ನಾನು ಸಾಯುವಾಗ, ನಮ್ಮ ದೇಹಗಳು ಸಮಾಧಿಗೆ ತೆರಳುತ್ತವೆ ಮತ್ತು ನಮ್ಮ ಆತ್ಮಗಳು ಹೇಡಿಸ್‌ಗೆ ತೆರಳುತ್ತವೆ; ಕೊನೆಯ ತೂತುರಿಯ ಶಬ್ಧದ ವರೆಗೆ ಸಮಾಧಿಯು ಮತ್ತು ಹೇಡಿಸ್ ನಮ್ಮನ್ನು ತನ್ನ ಹಿಡಿತದಲ್ಲಿ ಹಿಡಿದುಕೊಂಡಿರುತ್ತವೆ (1 ಕೊರಿಂಥ 15:52-57). ಆದರೂ, ದಾವೀದನು ಪ್ರೇರೇಪಿತನಾಗಿ, ಎಲ್ಲರಿಗೂ ಯಾವದು ಸತ್ಯವೋ[54] ಅದು ಕ್ರಿಸ್ತನ

ವಿಷಯದಲ್ಲಿ ಸತ್ಯವಲ್ಲ ಎಂದು ಸಾರಿದನು, ಹೇಡಿಸ್ ಮತ್ತು ಸಮಾಧಿ ಅವನನ್ನು ಹಿಡಿಯಲು ಸಾಧ್ಯವಾಗಲಿಲ್ಲ! ದೇವರು ಆತನ ಆತ್ಮವನ್ನು ಹೇಡಿಸ್‌ನಲ್ಲಿ ಅಥವಾ ಅವರ ದೇಹವನ್ನು ಸಮಾಧಿಯಲ್ಲಿ ಬಿಡಲಿಲ್ಲ!

ಯೇಸು ಎಬ್ಬಿಸಲ್ಪಟ್ಟನು ಎಂದು ಪೇತ್ರನ ಪುರಾವೆಯನ್ನು ಗಮನಿಸುವ ಮೊದಲು, ಇದನ್ನು ಸ್ವಲ್ಪ ಅವಲೋಕಿಸೋಣ: ನೀವು ಮತ್ತು ನಾನು, "ಕ್ರಿಸ್ತ" ಎಂಬ ಪದವನ್ನು ಕೇಳಿಸಿಕೊಂಡಾಗ, ನಾವು ಸಹಜವಾಗಿ ಯೇಸುವಿನ ಕುರಿತು ಆಲೋಚಿಸುತ್ತೇವೆ. ಪೇತ್ರನ ಮುಂದಾಗಿ ಹೋಗಬೇಡಿರಿ. ಈ ಹಂತದವರೆಗೆ, ಅವನ ಮಾತುಗಳನ್ನು ಕೇಳುತ್ತಿದ್ದವರು ಅರಿತಿದ್ದ ಯೇಸುವನ್ನು ದೇವರು ಎಬ್ಬಿಸಿದನೆಂದು ಅವನು *ಸಾಧಿಸಿದನು* (ವಚನಗಳು 22, 24), ಮತ್ತು ಅವರು ಹುಡುಕುತ್ತಿದ್ದ ಕ್ರಿಸ್ತನನ್ನು ದೇವರು ಎಬ್ಬಿಸುವನೆಂದು *ವಾಗ್ದಾನ* ಮಾಡಿದ್ದನು ಅವನು ಈಗಾಗಲೇ ಸಾಬಿತುಪಡಿಸಿದ್ದನು (ವಚನ 31). ಈಗ ಅವನು, ಅವರು ಅರಿತಿದ್ದ ಯೇಸು ಮತ್ತು ಅವರು ಹುಡುಕುತ್ತಿದ್ದ ಕ್ರಿಸ್ತನು ಇಬ್ಬರೂ ಒಂದೇ ಎಂದು ಸಾಬೀತುಪಡಿಸಬೇಕು. ಕ್ರಿಸ್ತನು ಎಬ್ಬಿಸಲ್ಪಡುವನು ಎಂದು ದಾವೀದನು ನುಡಿದಂತೆ, ಯೇಸು ಸತ್ತವರೊಳಗಿಂದ ಎಬ್ಬಿಸಲ್ಪಟ್ಟನು ಎಂದು ಪೇತ್ರನು ಸಾಬೀತು ಪಡಿಸುವದಕ್ಕೆ ತೊಡಗಿದನು.

## ಅಪೊಸ್ತಲರ ಉದ್ಯೋಗ (2:32)

ಪೇತ್ರನ ಮೊದಲ ಪುರಾವೆಯು ತನ್ನದೇ ಸಾಕ್ಷಿಯಾಗಿತ್ತು ಮತ್ತು ಇತರ ಅಪೊಸ್ತಲರದಾಗಿತ್ತು: "ಈ ಯೇಸುವನ್ನೇ ದೇವರು ಎಬ್ಬಿಸಿದನು; ಇದಕ್ಕೆ ನಾವೆಲ್ಲರು ಸಾಕ್ಷಿಗಳಾಗಿದ್ದೇವೆ" (ವಚನ 32). ಅವನು "ನಾವು ... ಎಲ್ಲ" ಎಂದು ಹೇಳುವಾಗ ತನ್ನ ಕೈಗಳನ್ನು ಚಾಚಿ ಹೊನ್ನೊಂದು ಅಪೊಸ್ತಲರನ್ನು ತೋರಿಸಿರಬಹುದು. ಹಳೆ ಒಡಂಬಡಿಕೆಯಲ್ಲಿ, "ಒಂದು ಸಂಗತಿಯು ಸ್ಥಾಪನೆಯಾಗಬೇಕಾದರೆ, ಇಬ್ಬರು ಇಲ್ಲವೇ ಮೂವರು ಇರಬೇಕು" (ಧರ್ಮೋಪದೇಶಕಾಂಡ 19:15). ಪೇತ್ರನ ಮಾತುಗಳನ್ನು ಕೇಳುತ್ತಿದ್ದವರು ಇಬ್ಬರು ಅಥವಾ ಮೂವರು ಸಾಕ್ಷಿಗಳನ್ನು ನೋಡುತ್ತಿರಲಿಲ್ಲ, ಬದಲಾಗಿ ದೋಷವಿಲ್ಲದ ಗುಣವುಳ್ಳ, ವೈಯಕ್ತಿಕವಾಗಿ ಯಾವ ಲಾಭವಿಲ್ಲದೇ (ಲೋಕವು ಎಣಿಸುವ ಹಾಗೆ) ಮತ್ತು ಯೇಸುವನ್ನು ಪ್ರಸಂಗಿಸುವದರಿಂದ[55] ಎಲ್ಲವನ್ನೂ ಕಳಕೊಳ್ಳುವವರಾದ ಹನ್ನೆರಡು ಜನರನ್ನು ನೋಡುತ್ತಿದ್ದರು.

ಪೇತ್ರನು ಈ ಆಲೋಚನೆಯನ್ನು ಇನ್ನೂ ವಿಸ್ತರಿಸಿರಬಹುದು, ತನ್ನದೇ ಆದ ಸಂದೇಹಗಳು ಮತ್ತು ಯೇಸು ನಿಜವಾಗಿಯೂ ಸಮಾಧಿಯಿಂದ ಎದ್ದಿದ್ದಾನೆ ಎಂದು ತನ್ನನ್ನು ಮನವರಿಕೆ ಮಾಡುವದು ಕಷ್ಟಕರವಾದದ್ದನ್ನು ಹೇಳಿದನು. ಬಹುಶಃ ಉಳಿದ ಅಪೊಸ್ತಲರು ತಮ್ಮ ಸಾಕ್ಷಿಗಳಿಂದ ಧ್ವನಿಗೂಡಿಸಿರಬಹುದು. ಅನೇಕ ಮುಖಗಳಲ್ಲಿ ಸಂದೇಹ ಕಾಣಿಸಿಕೊಂಡದ್ದನ್ನು ಥೋಮನು ಗಮನಿಸಿರಬಹುದುದೆಂದು ನಾನು ಎಣಿಸುತ್ತೇನೆ ಮತ್ತು ಅವನು, "ನಿಮಗೆ ಹೇಗೆ ತೋರುತ್ತದೆಂದು ನನಗೆ ಚೆನ್ನಾಗಿ ಗೊತ್ತು. ನಾನು ಅಲ್ಲಿ ಇದ್ದೆನು! ನಾನೂ ನಂಬಲು ಮನಸ್ಸು ಮಾಡಲಿಲ್ಲ. ಆದರೆ ಆತನು ನನ್ನ ಮುಂದೆ ಇದ್ದನು, ಮೂರು ವರ್ಷ ನಾನು ಆತನನ್ನು ಹಿಂಬಾಲಿಸಿದ್ದೇನೆ. ಆತನ ಮೊಳೆಯಿಂದ ತೂತಾದ ಮತ್ತು ಒಣಗಿದ ರಕ್ತದಿಂದ ಕೂಡಿದ ಕೈಗಳನ್ನು ಹಿಡಿದಿದ್ದೇನೆ. ಆತನ ಹೊರ ಅಂಗಿಯನ್ನು ನಾನು ತೆಗೆದು ಆತನ ಪಕ್ಕೆಯಲ್ಲಿನ ತೂತನ್ನು, ಘಾಸಿಗೊಂಡ ಮಾಂಸ ಮತ್ತು ಕಾಣುತ್ತಿರುವ ಎಲುಬುಗಳನ್ನು ನೋಡಿದ್ದೇನೆ! ಆತನ ಮುಂದೆ ಬಿದ್ದು ಕೂಗಿಕೊಂಡು, ನನ್ನ ಸ್ವಾಮಿ ನನ್ನ ದೇವರು ಎಂದು ಹೇಳುವದೊಂದು ಬಿಟ್ಟರೆ ನನಗೆ ಬೇರೇನು ಇರಲಿಲ್ಲ" (ಯೋಹಾನ 20:24-28).

## ಪರಿಶುದ್ಧಾತ್ಮನ ಪ್ರಸನ್ನತೆ (2:33)

ಜನರು ಗುಂಪಿನಲ್ಲಿದ್ದವರು ಅಲ್ಲಿ ನಡೆದ ಮಹತ್ಕಾರ್ಯಗಳಿಗೆ ಸಾಕ್ಷಿಯಾಗಿದ್ದದ್ದು ಪೇತ್ರನ

ಎರಡನೆಯ ಪುರಾವೆಯಾಗಿತ್ತು: "ಆತನು ದೇವರ ಬಲಗೈಯಿಂದ ಉನ್ನತಸ್ಥಾನಕ್ಕೆ ಏರಿಸಲ್ಪಟ್ಟು ವಾಗ್ದಾನವಾಗಿದ್ದ ಪರಿಶುದ್ಧಾತ್ಮವರನ್ನು ತಂದೆಯಿಂದ ಹೊಂದಿ ನೀವು ನೋಡಿ ಕೇಳುವದನ್ನು ಸುರಿಸಿದ್ದಾನೆ" (ವಚನ 33).

ಅವರು ಬಿರುಗಾಳಿಯ ಶಬ್ಧ ಕೇಳಿದ್ದರು, ಉರಿಯುವ ಬೆಂಕಿಯ ನಾಲಿಗೆಗಳನ್ನು ನೋಡಿದ್ದರು ಮತ್ತು ಅಪೊಸ್ತಲರು ಸರ್ವ ಭಾಷೆಗಳಲ್ಲಿ ಮಾತಾಡುವ ಅದ್ಭುತ ಮಹತ್ಕಾರ್ಯಕ್ಕೆ ಸಾಕ್ಷಿಯಾಗಿದ್ದರು. (ಯಾಕೆಂದರೆ ಪೇತ್ರನು "ನೀವು *ಇದನ್ನು* ಕಂಡು ಕೇಳಿದ್ದೀರಿ" ಎಂದು ಹೇಳಿದನು, ಬಹುಶಃ ಅಪೊಸ್ತಲರ ತಲೆಗಳ ಮೇಲೆ ಇನ್ನೂ ಬೆಂಕಿಯ ಉರಿ ಇರುವ ಸೂಚನೆಯಿರಬಹುದು. ಬಿರುಗಾಳಿಯ ಭಯ ಹುಟ್ಟಿಸುವ ಶಬ್ಧ ಇನ್ನೂ ಅಂಗಳದ ಒಂದು ಮೂಲೆಯಲ್ಲಿ ಮಾರ್ದನಿಸುತ್ತಿರಬಹುದು.) ಪರಿಶುದ್ಧಾತ್ಮನು ಅಲ್ಲಿ ಪ್ರಸನ್ನನಾಗಿದ್ದನು ಮತ್ತು ಯೇಸುವು ಸತ್ತವರೊಳಗಿಂದ ಎಬ್ಬಿಸಲ್ಪಟ್ಟನು ಎಂದು ಪೇತ್ರನು ಹೇಳುವಾಗ ದೇವರ ಪರವಾಗಿ ಮಾತಾಡಿದನೆಂದು ಎಲ್ಲರಿಗೆ ಸ್ಪಷ್ಟವಾಯಿತು.

## ಧರ್ಮಶಾಸ್ತ್ರದ ಪುರಾವೆ (2:34-36)

ಪೇತ್ರನು ಹೊಸ ಆಲೋಚನೆಯನ್ನು ಪರಿಚಯಿಸಿದನು: ದೇವರ ಬಲಗಡೆಯಲ್ಲಿ ಯೇಸು ಉನ್ನತಕ್ಕೇರಿಸಲ್ಪಟ್ಟದ್ದು. ಪುನರುತ್ಥಾನದ ಸಂಗತಿಯು ಸ್ಥಾಪಿಸಲ್ಪಟ್ಟ ನಂತರ, ಮುಂದಿನ ಪ್ರಶ್ನೆಯು, "ಯೇಸುವು ಸತ್ತವರೊಳಗಿಂದ ಎಬ್ಬಿಸಲ್ಪಟ್ಟಿದ್ದರೆ, ಈಗ ಅವನು ಎಲ್ಲಿದ್ದಾನೆ?" ಪೇತ್ರನ ಉತ್ತರವು, ಯೇಸುವು ಪರಲೋಕದಲ್ಲಿದ್ದಾನೆ; ಆತನು ದೇವರ ಬಳಿಗೆ ಏರಿಹೋಗಿದ್ದಾನೆ.

ಈ ವಿಚಾರವು ಯೆಹೂದ್ಯರಿಗೆ ತೀವ್ರವಾಗಿಯೂ ಮತ್ತು ಹೊಸತಾಗಿಯೂ ಇದ್ದುದರಿಂದ, ಇದೂ ಸಹಿತ ಮುಂತಿಳಿಸಿತ್ತು[56] ಎಂದು ತೋರಿಸುವದಕ್ಕೆ ಪೇತ್ರನು ಮತ್ತೆ ದಾವೀದನ ಪ್ರವಾದನೆಯನ್ನು ಉಲ್ಲೇಖಿಸಿದನು (ಕೀರ್ತನೆ 110:1). ಅವನು ಹೀಗೆ ಹೇಳಿದನು, "ದಾವೀದನು ಆಕಾಶಕ್ಕೆ ಏರಿಹೋಗಲಿಲ್ಲವಲ್ಲಾ. ತಾನೇ ಹೇಳುವ ಮಾತೇನೆಂದರೆ ನಾನು ನಿನ್ನ ವಿರೋಧಿಗಳನ್ನು ನಿನ್ನ ಪಾದಗಳಿಗೆ ಪೀಠವಾಗ ಮಾಡುವ ತನಕ ನನ್ನ ಬಲಗಡೆಯಲ್ಲಿ ಕೂತುಕೊಂಡಿರು ಎಂದು ಕರ್ತನು ನನ್ನ ಒಡೆಯನಿಗೆ ನುಡಿದನು ಎಂಬದೇ" (ವಚನಗಳು 34, 35). ನಿಮ್ಮ ಬಳಿ ಇದ್ದರೆ, ಮೊದಲ "ಕರ್ತನು" ಎಂಬ ಪದದ ಅಕ್ಷರಗಳು ಎಲ್ಲ ದೊಡ್ಡ ಅಕ್ಷರದಲ್ಲಿದೆ, ಮತ್ತು "ಕರ್ತನು" ಎಂಬ ಎರಡನೇಯ ಪದದ ಕೊನೆಯ ಮೂರು ಅಕ್ಷರಗಳು ಚಿಕ್ಕದಾಗಿದೆ. ಇದು, "ಕರ್ತನು" ಎಂಬ ಮೊದಲ ಪದವು "ಯೆಹೋವನನ್ನು" ಸೂಚಿಸುತ್ತದೆ (ದೇವರ ಪವಿತ್ರ ನಾಮ), ಮತ್ತು "ಕರ್ತನು" ಎಂಬ ಎರಡನೇಯ ಪದವು ಸಾಮಾನ್ಯವಾಗಿರುವ "ಕರ್ತನು" ಎನ್ನುವದನ್ನು ಸೂಚಿಸುತ್ತದೆ.[57] ಬೇರೆ ಮಾತುಗಳಲ್ಲಿ ಹೇಳುವದಾದರೆ, ಕರ್ತನು (ಅಂದರೆ ಯೆಹೋವನು) *ನನ್ನ* ಕರ್ತನಿಗೆ "ನನ್ನ ಬಲಗಡೆಯಲ್ಲಿ ಕೂತುಕೊಂಡಿರು" ಎಂದು ಹೇಳಿದನು. (ದೇವರ ಬಲಗಡೆಯಲ್ಲಿ ಕೂತುಕೊಳ್ಳುವದೆಂದರೆ, ಒಂದು ಅಧಿಕಾರದ ಸ್ಥಾನದಲ್ಲಿ ಕೂತುಕೊಳ್ಳುವದು, ಆತನೊಂದಿಗೆ ಸಹ - ಆಳ್ವಿಕೆ ಮಾಡುವದು [ಮತ್ತಾಯ 28:18].)

ಮೊದಲು ಮಾಡಿದ ವಾಗ್ವಾದವೇ ಪೇತ್ರನದಾಗಿತ್ತು: ತಾನು ಇನ್ನು ಸಮಾಧಿಯಲ್ಲಿದ್ದುದರಿಂದ ದಾವೀದನು ತನ್ನ ದಿವಾರೋಹಣದ ಕುರಿತು ಮಾತಾಡಲಿಲ್ಲ; ಆದುದರಿಂದ ಎರಡನೇಯ "ಕರ್ತನು" ಮೆಸ್ಸಿಯನಾಗಿರಬೇಕು. ದಾವೀದನು *ಕ್ರಿಸ್ತನ* ದಿವಾರೋಹಣ ಮತ್ತು ಮಹಿಮೆಯ ಕುರಿತು ಮಾತಾಡುತ್ತಿದ್ದನು.

ಕ್ರಿಸ್ತನು ದೇವರ ಬಲಗಡೆಯಲ್ಲಿ ಕೂತು ಕೊಂಡಿರುವದರ ಕುರಿತು ಮಾತಾಡುವಾಗ, 30 ಮತ್ತು 31ರಲ್ಲಿ ನಮೂದಿಸಲ್ಪಟ್ಟ ಆಲೋಚನೆಯನ್ನು ಪೇತ್ರನು ಹೇಳಿದನು: "ಅವನು ಪ್ರವಾ ದಿಯಾಗಿದ್ದು ನಿನ್ನ ಸಂತತಿಯವರೊಳಗೆ ಒಬ್ಬನನ್ನು ನಾನು ನಿನ್ನ ಸಿಂಹಾಸನದ ಮೇಲೆ

ಕುಳ್ಳಿರಿಸುವೆನೆಂದು ತನಗೆ ದೇವರು ಆಣೆಯಿಟ್ಟು ಹೇಳಿದ್ದನ್ನು ಬಲ್ಲವನಾಗಿ ಮುಂದಾಗುವದನ್ನು ಕಂಡು ಕ್ರಿಸ್ತನ ಪುನರುತ್ಥಾನವನ್ನೇ ಕುರಿತು ಆತನು ಪಾತಾಳದಲ್ಲಿ ಬಿಡಲ್ಪಡಲಿಲ್ಲವೆಂತಲೂ ಶರೀರವು ಕೊಳೆಯುವ ಅವಸ್ಥೆಯನ್ನನು ಭವಿಸುವದಿಲ್ಲವೆಂತಲೂ ಹೇಳಿದನು." (ಒತ್ತಿ ಹೇಳಿದ್ದು ನನ್ನದು.) ಪುನರುತ್ಥಾನವು ಅಂತ್ಯವಲ್ಲ ಆದರೆ ಮೆಸ್ಸಿಯನು ದಾವೀದನು ಸಿಂಹಾಸನದಲ್ಲಿ ಕೂತುಕೊಳ್ಳುವದಕ್ಕೆ ಮೊದಲಾದದ್ದು ಎಂದು ವಚನಗಳು 30 ಮತ್ತು 31 ಹೇಳುತ್ತದೆ. ಈ ಆಲೋಚನೆಯನ್ನು ವಚನ 33 ಮತ್ತು ವಚನ 34ಕ್ಕೆ ಹೋಲಿಸಿರಿ. ವಚನ 33ರಲ್ಲಿ ಯೇಸು ಮೆಸ್ಸಿಯನ ಕುರಿತ ಪ್ರವಾದನೆಯನ್ನು ನೆರವೇರಿಸಿದನು ಎಂದು ಪೇತ್ರನು ಸಾರಿದನು, ಯಾಕೆಂದರೆ ಆತನು *ದೇವರ ಬಲಗಡೆಗೆ* ಏರಿಸಲ್ಪಟ್ಟನು. ವಚನ 34 ಗಮನಿಸುವಂತೆ, ಅವನು ದೇವರ ಬಲಗಡೆಯಲ್ಲಿ ಕೂತುಕೊಂಡಿದ್ದಾನೆ. ದಾವೀದನ ಸಿಂಹಾಸನದ ಮೇಲೆ ಕೂತು ಕೊಳ್ಳುವದು ಮತ್ತು ದೇವರ ಬಲಗಡೆಯಲ್ಲಿ ಕೂತುಕೊಳ್ಳುವದು ಎರಡು ಒಂದೇ ಆಗಿದೆ ಎಂದು ನಾವು ಮುಕ್ತಾಯ ಮಾಡಬಹುದು. ಯೇಸುವಿನ ಸಿಂಹಾಸನವು *ಪರಲೋಕದಲ್ಲಿದೆ*, ಭೂಮಿಯ ಮೇಲಲ್ಲ. ಪ್ರಕಟನೆ 3:21ರಲ್ಲಿ, ಯೇಸು ಲವೋದಿಕೀಯದ ಸಭೆಗೆ, "ನಾನು ಜಯಹೊಂದಿ ನನ್ನ ತಂದೆಯ ಸಂಗಡ ಸಿಂಹಾಸನದಲ್ಲಿ ಕೂತುಕೊಂಡೆನು." ಯೇಸುವಿನ ಸಿಂಹಾಸನವು ದಾವೀದನ ಸಿಂಹಾಸನ ಮತ್ತು ದೇವರ ಸಿಂಹಾಸನ ಎಂದು ಯಾಕೆ ಕರೆ ಯಲ್ಪಟ್ಟಿತು? ಈ ಸಿಂಹಾಸನವು ದಾವೀದನ ಸಿಂಹಾಸನವೆಂದು ಕರೆಯಲ್ಪಟ್ಟಿತು ಯಾಕೆಂದರೆ, ಅದು ದಾವೀದನ ವಂಶಾವಳಿಯಿಂದ ಬಂದದ್ದರಿಂದ, ಯೇಸುವನ್ನು ಅಧಿಕೃತ ಅರಸನ್ನಾಗಿ ಮಾಡಿತು. ಅದು ದೇವರ ಸಿಂಹಾಸನ ಯಾಕೆಂದರೆ ಆತನು ಎಲ್ಲ ಅಧಿಕಾರದ ಮೂಲವಾಗಿದ್ದಾನೆ.[58]

ಆದುದರಿಂದ ಕ್ರಿಸ್ತನು ಈಗ ಆಳುತ್ತಿದ್ದಾನೇ[59] ಮತ್ತು ವಚನ 35ರ ಪ್ರಕಾರ "ಆತನ ವೈರಿಗಳನ್ನು ಆತನ ಪಾದಗಳ ಕೆಳಗೆ ಹಾಕುವ ತನಕ" ಆಳ್ವಿಕೆಯನ್ನು ಮುಂದುವರಿಸುವನು. ಇದು ನನಗೆ ನೆನಪಿಗೆ 1 ಕೊರಿಂಥ 15:25, 26 ತರುತ್ತದೆ:

ವಚನಗಳು 33ರಿಂದ 35 ವರೆಗೆ ಇನ್ನೊಮ್ಮೆ ಪುನರಾವಲೋಕಿಸೋಣ: ಪುರುತ್ಥಾನ ವಾದ ಯೇಸು ಪರಲೋಕಕ್ಕೆ ಏರಿಹೋದನೆಂದು ಮತ್ತು ಅಲ್ಲಿ ಆತನು ರಾಜನೆಂದು ಕರೆಯಲ್ಪಟ್ಟಿದ್ದಾನೆಂದು ಪೇತ್ರನು ಸಾರಿದನು! ನಂತರ ಪರಿಶುದ್ಧಾತ್ಮನು ಆತನ ಕಿರೀಟ ಧಾರಣೆಯನ್ನು ಪ್ರಕಟಿಸುವದಕ್ಕೆ ಕಳುಹಿಸಲ್ಪಟ್ಟನು! (ಬಹು ಹಿಂದಿನ ನನ್ನ ಅಪೊಸ್ತಲರ ಕೃತ್ಯಗಳ ತರಗತಿಯಲ್ಲಿ, ಜೆ. ಡಬ್ಲು. ರಾಬರ್ಟ್ಸ್ ಅವರು ಈ ಸಂಧರ್ಭವನ್ನು ವೆಸ್ಟ ಮಿನಿಸ್ಟರ್ ಅಬ್ಬೆಯಲ್ಲಿನ ಬ್ರಿಟಿಷರ ಅರಸನ ಕಿರೀಟಧಾರಣೆಗೆ ಹೋಲಿಸಿದ್ದಾರೆ. ತದನಂತರ ಒಬ್ಬ ಸಂದೇ ಶಕನು ಹೊರಗೆ ಕಾಯುತ್ತಿದ್ದ ಜನರ ಗುಂಪಿಗೆ "ನಮಗೆ ಒಬ್ಬ ಅರಸನು ಇದ್ದಾನೆ! ಅರಸನು ಚಿರಂಜೀವಿಯಾಗಲಿ!") ಎಂದು ಪ್ರಕಟಿಸಲು ಅವಸರಿಸುತ್ತಿದ್ದನು.

ಪೇತ್ರನು ಮುಕ್ತಾಯ ಮಾಡಲು ಸಿದ್ಧನಾದನು. ಕ್ರಿಸ್ತನ ಕುರಿತು ಹಳೆ ಒಡಂಬಡಿಕೆ ಏನು ಹೇಳುತ್ತದೆ ಅದನ್ನು ಗಮನಿಸಿದನು. ಯೇಸು ಪ್ರತಿಯೊಂದು ಪ್ರವಾದನೆಯನ್ನು ನೆರವೇ ರಿಸಿದನು ಎಂದು ಸಾಬೀತು ಪಡಿಸಿದನು, ಎರಡೂ ಆಲೋಚನೆಗಳನ್ನು ಒಟ್ಟಿಗೆ ಕಲೆಹಾಕಲು ಸಿದ್ಧನಾಗಿದ್ದನು. ಪರಿಣಾಮಕ್ಕಾಗಿ ಅವನು ಸ್ವಲ್ಪ ನಿಂತಿರುವದನ್ನು ನಾನು ಊಹಿಸಬಲ್ಲೆನು, ನಂತರ ಗುಡುಗಿನೋಪಾದಿಯಲ್ಲಿರುವ ಸ್ವರದಿಂದ: "ಆದುದರಿಂದ ನೀವು ಶಿಲುಬೆಗೆ ಹಾಕಿಸಿದ ಈ ಯೇಸುವನ್ನೇ ದೇವರು ಒಡೆಯನನ್ನಾಗಿಯೂ ಕ್ರಿಸ್ತನನ್ನಾಗಿಯೂ ಮಾಡಿದ್ದಾನೆಂಬದು ಇಸ್ರಾಯೇಲ್ ಕುಲದವರಿಗೆಲ್ಲಾ ನಿಸ್ಸಂದೇಹವಾಗಿ ತಿಳಿದಿರಲಿ ಎಂದು ಹೇಳಿದನು" (ವಚನ 36)![60]

ಯೇಸುವಿನ ಕುರಿತು ಯೆಹೂದ್ಯರು ನಡಕೊಂಡ ರೀತಿಯು, ದೇವರು ಆತನ ಕುರಿತು ನಡಕೊಂಡದ್ದಕ್ಕಿಂತ ವಿಭಿನ್ನವಾಗಿದೆ: ಯೆಹೂದ್ಯರು ಆತನನ್ನು ಕ್ರೂಜೆಗೆ ಹಾಕಿದರು, ಆದರೆ ದೇವರು ಆತನನ್ನು ಕರ್ತನೆಂದೂ ಮತ್ತು ಕ್ರಿಸ್ತನೆಂದೂ ಮಾಡಿದನು! ಸಕಲ ಮಾನವ ಕುಲಕ್ಕೆ

ಯೇಸುವೇ "ಕ್ರಿಸ್ತನೆಂದು," ಅವರು ಶತಮಾನಗಳಿಂದ ಕಾಯುತಿದ್ದ ಮೆಸ್ಸೀಯನು ಎಂದು ದೇವರು ಪ್ರಕಟಿಸಿದನು. ಪುನರುತ್ಥಾನದ ಮೂಲಕ ದೇವರು, ಯೇಸುವೇ "ಕರ್ತನೆಂದು" - ಅವರ ಅಧಿಪತಿ, ಅವರ ನಿತ್ಯತ್ವದ ಅಂತಿಮ ಗುರು ಎಂದೂ, ಅವರು ಆಧಿಪತ್ಯ ಸಲ್ಲಿಸಲು ಇರುವಾತ ಅವನೊಬ್ಬನೇ ಎಂದೂ ಸಿದ್ಧ ಮಾಡಿದನು!

ಎಂಥಾ ಅದ್ಭುತ ಪ್ರಸಂಗ; ಎಂಥಾ ಹೃದಯಂಗಮಯವಾದ ಮುಕ್ತಾಯ!

## ಮುಕ್ತಾಯ

ಮತ್ತೊಮ್ಮೆ ಅಪೊಸ್ತಲರ ಕೃತ್ಯಗಳು 2ರ ಉಳಿದ ಅಧ್ಯಾಯನವನ್ನು ನಾವು ಮನಸ್ಸು ಮನಸ್ಸಿಲ್ಲದೇ ಬಿಟ್ಟು ಮುಂದೆ ಹೋಗಬೇಕು. "ಪ್ರಾರಂಭಗಳ" ಮುಖ್ಯ ಪ್ರಸ್ತಾಪವು, ಅಧ್ಯಾಯದಲ್ಲಿ ಮುಂದುವರಿಯುತ್ತದೆ. ವಚನಗಳು 37ರಿಂದ 41ವರೆಗೆ, ಸುವಾರ್ತೆಗೆ ವಿಧೇಯರಾಗುವದರ ಪ್ರಾರಂಭವನ್ನು ನೋಡುತ್ತೇವೆ. ಜನರು "ನಾವೇನು ಮಾಡಬೇಕು?" ಎಂದು ಕೂಗಿದರು (ವಚನ 37); ಪೇತ್ರನು, "ಅವರಿಗೆ ನಿಮ್ಮ ಪಾಪಗಳು ಪರಿಹಾರವಾಗುದಕ್ಕಾಗಿ ನಿಮ್ಮಲ್ಲಿ ಪ್ರತಿಯೊಬ್ಬರು ದೇವರ ಕಡೆಗೆ ತಿರುಗಿಕೊಂಡು ಯೇಸು ಕ್ರಿಸ್ತನ ಹೆಸರಿನ ಮೇಲೆ ದೀಕ್ಷಾಸ್ನಾನಮಾಡಿಸಿಕೊಳ್ಳಿರಿ" (ವಚನ 38); ಮತ್ತು "ಅವನ ವಾಕ್ಯವನ್ನು ಸ್ವೀಕರಿಸಿದವರು ದೀಕ್ಷಾಸ್ನಾನ ಹೊಂದಿದರು" (ವಚನ 41). ನಂತರ ವಚನ 42ರಿಂದ ವಚನ 47 ವರೆಗೆ ಸಭೆಯ ಪ್ರಾರಂಭವನ್ನು ಕುರಿತು ಹೇಳುತ್ತದೆ, ಯಾರ್‍ಯಾರು ದೀಕ್ಷಾಸ್ನಾನ ಹೊಂದಿದರೋ ಅವರು, ಕ್ರಿಸ್ತನಲ್ಲಿ ಹೊಸ ಜೀವನ ಜೀವಿಸುವದೆಂದರೆ ಏನು ಎಂದು ಕಲಿತರು. ಈ ಉತ್ಸಾಹ ಅಧ್ಯಾಯದ ಅಂತ್ಯದ ವರೆಗೆ ಮುಂದರಿಯುತ್ತದೆ.

ಅಧ್ಯಾಯದ ಹೃದಯವು ಮಾತ್ರ, ಯೇಸುವಿನ ಕುರಿತು ಪೇತ್ರನು ಮಾಡಿದ ಪ್ರಸಂಗವಾಗಿದೆ. ಪ್ರಸಂಗಿಸುವದು ಒಂದು ಚೆಂಡನ್ನು ಎಸೆಯುವ ಹಾಗೆ ಎಂದು ಒಬ್ಬರು ಹೇಳಿದ್ದಾರೆ.[61] ಪ್ರತಿ ಬಾರಿ ಒಬ್ಬ ಪ್ರಸಂಗಿಯು, ಒಂದು ಉತ್ತಮ ಅಂಶವನ್ನು ಹೇಳುವಾಗ, ಅವನು ತನ್ನ ಮಾತು ಕೇಳುತ್ತಿರುವವರ ಕಡೆಗೆ, ಅದು ಒಂದು ಚೆಂಡನ್ನು ಎಸೆದಂತೆ ತೋರುತ್ತದೆ ಮತ್ತು ಅವರು ಏನು ಮಾಡುತ್ತಾರೋ ಎಂದು ಗಮನಿಸುತ್ತಾನೆ. ಕೆಲವರು ಆ ಚೆಂಡು ಅವರ ತಲೆಯ ಮೇಲಿಂದ ಹಾಯ್ದು ಹೋಗುವಂತೆ ಮಾಡುತ್ತಾರೆ, ಬಹುಶಃ ಅವರಿಗೆ ಚಂಡು ಎಸೆಯಲ್ಪಟ್ಟದ್ದು ಗೊತ್ತಿಲ್ಲ. ಕೆಲವರು ಅದನ್ನು ಹಿಡಿಯುತ್ತಾರೆ, ಅದನ್ನು ಹಿಡುಕೊಳ್ಳುತ್ತಾರೆ ಆದರೆ ಮತ್ತಿನ್ನೇನ್ನೂ ಮಾಡುವದಿಲ್ಲ. ಕೆಲವರು ಅದನ್ನು ಹಿಡಿದುಕೊಂಡು ಮತ್ತೆ ಪ್ರಸಂಗಿಯ ಕಡೆ ಎಸೆಯುತ್ತಾರೆ. ಪ್ರಸಂಗವೆಂದರೆ ಅದೇ.

ಯೇಸುವನ್ನು ನಾವು ಒಂದು ಬೌದ್ಧಿಕ ವ್ಯಾಯಾಮವೆಂದು ಅಭ್ಯಸಿಸುತ್ತಿಲ್ಲ. ನಾನು ನಿಮ್ಮ ಕಡೆಗೆ "ಚೆಂಡುಗಳನ್ನು ಎಸೆಯುತ್ತಿದ್ದೇನೆ" - ನೀವು ಅರ್ಥಮಾಡಿಕೊಳ್ಳಬೇಕಾದ ವಿಚಾರಗಳು ಮತ್ತು ತತ್ವಗಳು. ನೀವು ಅವುಗಳನ್ನು ಏನು ಮಾಡಿದ್ದೀರಿ? ಅವು ನಿಮ್ಮ ತಲೆಯ ಮೇಲಿಂದ ಹಾರಿ ಹೋಗುವಂತೆ ಮಾಡಿದ್ದೀರೋ? ನೀವು ಅವುಗಳ ವಿಷಯದಲ್ಲ ಏನೂ ಮಾಡದೇ ಹಿಡಿದು ಕೊಂಡಿದ್ದೀರೋ (ಅರ್ಥಮಾಡಿಕೊಂಡಿದ್ದೀರೋ)? ಅಥವಾ ಮೊದಲ ಬಾರಿ ಸಂಪೂರ್ಣವಾಗಿ ಸುವಾರ್ತೆಯು ಸಾರಲ್ಪಟ್ಟಾಗ ಮೂರು ಸಾವಿರ ಜನರು ಪ್ರತಿಸ್ಪಂದಿಸಿದಂತೆ ನೀವು ಅವುಗಳನ್ನು ಹಿಂದೆ ಎಸೆಯಲು ಸಿದ್ಧರಾಗಿದ್ದೀರೋ?

ಅಪೊಸ್ತಲರ ಕೃತ್ಯಗಳು 2:41 ಗಮನಿಸುವಂತೆ, "ಅವನ ಮಾತಿಗೆ ಒಪ್ಪಿಕೊಂಡವರು ದೀಕ್ಷಾಸ್ನಾನಮಾಡಿಸಿಕೊಂಡರು. *ಆ ದಿನ* ಸುಮಾರು ಸಾವಿರ ಜನರು ಅವರಲ್ಲಿ ಸೇರಿದರು" (KJV; ಒತ್ತಿ ಹೇಳಿದ್ದು ನನ್ನದು). ನೀವು ಯೇಸುವಿನ ಸಂದೇಶವನ್ನು ಸಂತೋಷದಿಂದ ಸ್ವೀಕರಿಸಿದ್ದರೆ, ನೀವು ಆತನ ಹೆಸರಿನಲ್ಲಿ ದೀಕ್ಷಾಸ್ನಾನ ಹೊಂದಲು ಹಿಂತೆಗೆಯುವದಿಲ್ಲ. ಅದೇ ದಿನವೇ ಮೂರು ಸಾವಿರ ಜನರು ದೀಕ್ಷಾಸ್ನಾನ ಹೊಂದಿದರು. ನೀವು ದೀಕ್ಷಾಸ್ನಾನ ಹೊಂದ ಬೇಕಾದರೆ, ಈ *ಹೊತ್ತೇ* ಮಾಡಿರಿ!

## ಪ್ರಸಂಗ ಟಿಪ್ಪಣಿಗಳು

1. ಅಪೊಸ್ತಲರ ಕೃತ್ಯ ಪುಸ್ತಕದಲ್ಲಿನ ಪರಿವರ್ತನೆಗಳ ಕುರಿತು ಪ್ರಸಂಗಗಳ ಸರಣಿಯನ್ನು ಬೋಧಿಸಬಹುದು. "ಅಪೊಸ್ತಲರ ಕೃತ್ಯಗಳು 2: ಹೇಗೆ 3,000 ಜನರು ರಕ್ಷಿಸಲ್ಪಟ್ಟರು," ಇದನ್ನು ಒಂದು ಬರೆಯುವ ಬಟ್ಟೆಯ ಹಲಗೆಯನ್ನು ಉಪಯೋಗಿಸಿ ನಾನು ಈ ಪಾಠವನ್ನು ಬೋಧಿಸುತ್ತೇನೆ. ಈ ಘಟನೆಯನ್ನು ಸೂಚಿಸುವದಕ್ಕೆ ಮೇಲಿನ ಎಡ ಬದಿಯಲ್ಲಿ ಮುಖ್ಯ ಪದಗಳಿವೆ. ಹಲಗೆಯ ಮಧ್ಯದಲ್ಲಿ ಜನರಿಗೆ ಪ್ರಸಂಗಿಸುವಾಗ ಪೇತ್ರನು ನಿಂತಿರುವ ಚಿತ್ರವಿದೆ. ಮುಖ್ಯ ಅಂಶಗಳು ಹಲಗೆಯ ಕೆಳಗೆ ಇವೆ. ಪೇತ್ರನ ಪ್ರಸಂಗದ ಸರಳ ರೂಪ ರೇಷೆಯು ಮೇಲೆ ಬಲ ಬದಿಯಲ್ಲಿದೆ. ಈ ಮಂಡನೆಯನ್ನು ಮಾಡುವದಕ್ಕೆ ಒಂದು ಚಿತ್ರ ಪಟ, ಬರೆಯುವ ಹಲಗೆ ಉಪಯೋಗಿಬಹುದು.

2. ನೀವು ಒಂದು ವೇಳೆ, ಅಪೊಸ್ತಲರ ಕೃತ್ಯಗಳಲ್ಲಿನ ಪರಿವರ್ತನೆಯ ಉದಾಹರಣೆಗಳ ಮೇಲೆ ಮೂರು ತಿಂಗಳ ತರಗತಿಗಳನ್ನು ತೆಗೆದುಕೊಳ್ಳಬೇಕಾಗಿದ್ದರೆ, ಒಂದು ವೇಳ ಪಟ್ಟಿ ಹೀಗಿದೆ:

1. ಮತ್ತಾಯ 28:18-20; ಮಾರ್ಕ 16:15, 16; ಮತ್ತು ಲೂಕ 24:45-49 ದಲ್ಲಿನ ಮಹಾ ನಿಯೋಜನೆ. ಇದು ಪರಿವರ್ತನೆಯ ಉದಾಹರಣೆಗಳಿಗೆ ಹಿನ್ನೆಲೆ ಕೂಡುತ್ತದೆ.
2. ಪಂಚಶತ್ತಮ ದಿನದಂದು ಯೆಹೂದ್ಯರ ಪರಿವರ್ತನೆ (ಅಪೊಸ್ತಲರ ಕೃತ್ಯಗಳು 2).
3. ಸಮಾರ್ಯದವರ ಪರಿವರ್ತನೆ (ಅಪೊಸ್ತಲರ ಕೃತ್ಯಗಳು 8).
4. ಮಂತ್ರವಾದಿ ಸೀಮೋನ (ಮಂತ್ರವಾದಿಯ ಪರಿವರ್ತನೆ ಅಪೊಸ್ತಲರ ಕೃತ್ಯಗಳು 8).
5. ಐಥಿಯೋಪ್ಯದ ಕಂಚುಕಿಯ ಪರಿವರ್ತನೆ (ಅಪೊಸ್ತಲರ ಕೃತ್ಯಗಳು 8).
6. ಸೌಲನ ಪರಿವರ್ತನೆ (ಅಪೊಸ್ತಲರ ಕೃತ್ಯಗಳು 9; 22; 26).
7. ಕೊರ್ನೇಲ್ಯನ ಪರಿವರ್ತನೆ (ಅಪೊಸ್ತಲರ ಕೃತ್ಯಗಳು 10, 11).
8. ಲುದ್ಯಳ ಪರಿವರ್ತನೆ (ಅಪೊಸ್ತಲರ ಕೃತ್ಯಗಳು 16).
9. ಸೆರೆಯ ಯಜಮಾನನ ಪರಿವರ್ತನೆ (ಅಪೊಸ್ತಲರ ಕೃತ್ಯಗಳು 16).
10. ಕೊರಿಂಥದವರ ಪರಿವರ್ತನೆ (ಅಪೊಸ್ತಲರ ಕೃತ್ಯಗಳು 18).
11. ಅಪೊಲ್ಲೊಸ: ಒಬ್ಬ ಬೋಧಕನ ಪರಿವರ್ತನೆ (ಅಪೊಸ್ತಲರ ಕೃತ್ಯಗಳು 18).
12. ಫೆಲಿಕ್ಸ್‌ನ ಪರಿವರ್ತನೆ (ಅಪೊಸ್ತಲರ ಕೃತ್ಯಗಳು 24).
13. ಅಗ್ರಿಪ್ಪನು ಪರಿವರ್ತನೆ ಆಗದಿದ್ದದ್ದು (ಅಪೊಸ್ತಲರ ಕೃತ್ಯಗಳು 25; 26).

ಅಪೊಸ್ತಲರ ಕೃತ್ಯಗಳು ಪುಸ್ತಕವನ್ನು ನಾವು ಧ್ಯಾನಿಸುವಾಗ, ಸಂಕ್ಷಿಪ್ತ ರೂಪ ರೇಶೆಯನ್ನು ಮತ್ತು ದೃಶ್ಯ - ಸಾಹಾಯದ ವಿಚಾರಗಳನ್ನು ನಾನು ಕೊಡುತ್ತೇನೆ. ಪಾಠದ ಟಿಪ್ಪಣಿಯು, ನಿಮಗೆ ಬೇಕಾಗುವ ಆಧಾರ ಕೊಡುವ ಲೇಖನವನ್ನು ಹೊಂದಿದೆ.

3. ಅಪೊಸ್ತಲರ ಕೃತ್ಯಗಳು 2ರಲ್ಲಿ ವಿವರಿಸಲಾದ ಪರಿವರ್ತನೆಯ ವಿಷಯವನ್ನು ಇನ್ನೊಂದು ಆಶ್ಚರ್ಯಕರವಾದ ರೀತಿಯೆಂದರೆ, "ಯಾಕೆ 97,000 ಜನರು ರಕ್ಷಿಸಲ್ಪಡಲಿಲ್ಲ!" ಎಂಬ ವಿಷಯದ ಮೇಲೆ ಪ್ರಸಂಗಿಸುವದು. ಯೆಹೂದ್ಯರ ಮೂರು ಮುಖ್ಯ ಹಬ್ಬದ ದಿನಗಳಲ್ಲಿ, ಯೆರೂಸಲೇಮಿನ ಮತ್ತು ಸಮೀಪದ ಪ್ರದೇಶದ ಜನಸಂಖ್ಯೆಯು ನೂರಾರು ಸಾವಿರಾರಕ್ಕೆ ಹೆಚ್ಚುತ್ತಿತ್ತು (ಕೆಲವರ ಪ್ರಕಾರ ಅದು ಒಂದು ಮಿಲಿಯನ್). ಸುರಕ್ಷಿತವಾಗಿ ಹೇಳಬೇಕಾದರೆ,

## ಅಪೊಸ್ತಲರ ಕೃತ್ಯಗಳು 2: 3,000 ಜನರು ಹೇಗೆ ರಕ್ಷಿಸಲ್ಪಟ್ಟರು

**ಪಂಚಾಶತ್ತಮ**

**12ಅಪೊಸ್ತಲರು**

**ಆಲಯ**



**ಯೇಸುವೇ ಕ್ರಿಸ್ತನು!**

- **ಮಹತ್ತುಗಳು**
- **ಪ್ರವಾದನೆಗಳು**
- **ಪುನರುತ್ಥಾನ**
- **ಪರಿಶುದ್ಧಾತ್ಮನ ಸುರಿಯುವಿಕೆ**

1. ಕ್ರಿಸ್ತನ ಕುರಿತು ಕೇಳುವದರಿಂದ.
2. ಕ್ರಿಸ್ತನಲ್ಲಿ ನಂಬಿಕೆ ಇಡುವದರಿಂದ.
3. ಕ್ರಿಸ್ತನಿಗೆ ವಿಧೇಯರಾಗುವದರಿಂದ “ಪಶ್ಚಾತಾಪಪಟ್ಟು, ದೀಕ್ಷಾಸ್ನಾನ ಹೊಂದಿರಿ.”
4. ತಕ್ಷಣವೇ ಕ್ರಿಸ್ತನಿಗೆ ವಿಧೇಯರಾಗುವದರಿಂದ.
5. ಕ್ರಿಸ್ತನ ಸಭೆಗೆ ಸೇರುವದರಿಂದ.
6. ಕ್ರಿಸ್ತನೊಂದಿಗೆ ನಡೆಯುವದರಿಂದ.

*ಪೇತ್ರನ ಪ್ರಸಂಗವನ್ನು ಸೂಚಿಸುವ ಫ್ಲಾನೇಲ್ ಬೋರ್ಡ್*

100,000 ಎಂದು ಹೇಳಬಹುದು. ಮೂರು ಸಾವಿರ ಜನರು ದೀಕ್ಷಾಸ್ನಾನ ಹೊಂದಿದ್ದರಿಂದ, ಸುಮಾರು 97,000 ಜನರು ಹೊಂದಲಿಲ್ಲ! ಯಾಕೆ? ಪ್ರತಿಕ್ರಿಯೆ ತೋರಿಸಿದ ಮೂರು ಸಾವಿರ ಜನರು ಏನನ್ನು ವ್ಯಕ್ತ ಪಡಿಸಿದರು ಎಂದು ಆಲೋಚಿಸಿರಿ; ನಂತರ ಅದನ್ನು ತಿರುಗಿಸಿ, ಉಳಿದವರು ಏನನ್ನು ವ್ಯಕ್ತ ಪಡಿಸಲಿಲ್ಲವೆಂದು ಆಲೋಚಿಸಿರಿ. ಉದಾಹರಣೆಗೆ: 97,000 ಜನರು ಪೇತ್ರನ ಪ್ರಸಂಗದಿಂದ ಪ್ರೇರಿತರಾಗಲಿಲ್ಲ. ಅವರು ಯೇಸುವೇ ಕ್ರಿಸ್ತನೆಂದು ನಂಬಲಿಲ್ಲ. ಅವರು ಏನು ಮಾಡಬೇಕೆಂದು ತಿಳುಕೊಳ್ಳಲು ಆಸಕ್ತಿ ತೋರಿಸಲಿಲ್ಲ. ಪೇತ್ರನ ಸಂದೇಶವನ್ನು ಅವರು "ಸಂತೋಷದಿಂದ" ಸ್ವೀಕರಿಸಲಿಲ್ಲ (KJV ಯ ಪ್ರಕಾರ).ಅವರು ಪಶ್ಚಾತಾಪ ಪಡಲಿಲ್ಲ. ದುಷ್ಟ ಜನರಿಂದ ದೂರವಿರಲು ಮನಸ್ಸು ಮಾಡಲಿಲ್ಲ. ಆದುದರಿಂದ ಅವರು ದೀಕ್ಷಾಸ್ನಾನ ಹೊಂದಲಿಲ್ಲ. ಅವರು ರಕ್ಷಿಸಲ್ಪಡಲಿಲ್ಲ. ಆದುದರಿಂದ ದೇವರು ಅವರನ್ನು ಸಭೆಗೆ ಸೇರಿಸಲಿಲ್ಲ. ಇಂದು ಅನೇಕ ಜನರು ಯಾಕೆ ಸುವಾರ್ತೆಗೆ ವಿಧೇಯರಾಗುವದಿಲ್ಲವೆಂದು ಅನೇಕ ಕಾರಣಗಳನ್ನು ನೀವು ಹೇಳಬಹುದು.

---

ಟಿಪ್ಪಣಿಗಳು

[1]ಪದ ಸಂಗ್ರಹದಲ್ಲಿ "ಸುವಾರ್ತೆಯನ್ನು" ನೋಡಿರಿ. [2]"ಹನ್ನೊಂದು" ಇದು 1:26ರಂತೆ ಇತರ ಅಪೊಸ್ತಲರನ್ನು ಸೂಚಿಸುತ್ತದೆ (ಉಳಿದ ಎಲ್ಲಾ ಅಪೊಸ್ತಲರು ಹೆಸರಿಸಲ್ಪಟ್ಟಾಗ, ಅವರು "ಹನ್ನೆರಡು" ಎಂದು ಕರೆಸಿಕೊಳ್ಳುತ್ತಿದ್ದರು [6:2].) ಈ ಪ್ರಸಂಗದ ಅಂತ್ಯದಲ್ಲಿ ಎಲ್ಲಾ ಅಪೊಸ್ತಲರನ್ನು ಜನರು ಉದ್ದೇಶಿಸಿ ಮಾತಾಡಿದ್ದರಿಂದ, ಪೇತ್ರನು ಪ್ರಸಂಗಿಸಿ ಮತ್ತು ಉಳಿದ ಹನ್ನೊಂದು ಜನರು ಅದನ್ನು ಅಲ್ಲಿ ಪ್ರತಿನಿಸಿದ್ಧ ಇತರ ಭಾಷೆಗೆ ತರ್ಜುಮೆ ಮಾಡಿರುವ ಸಾಧ್ಯತೆ ಇದೆ (6:2). ಪೇತ್ರನು ಒಬ್ಬನೇ ಒಂದೇ ಸಾಮಾನ್ಯ ಭಾಷೆಯಲ್ಲಿ ಎಲ್ಲರೂ ಅರ್ಥಮಾಡಿಕೊಳ್ಳ ಬೇಕೆಂದು ಮಾಥಡಿರುವ ಸಾಧ್ಯತೆಯೂ ಇದೆ - ಬಹುಶ ಕೋಯಿನೆ ಗ್ರೀಕ, ಮತ್ತು ಉಳಿದ ಅಪೊಸ್ತಲರು ಅವನ ಸುತ್ತಲೂ ಇದ್ದುಕೊಂಡು ಸಾಕ್ಷಿಗಳಾಗಿರಬಹುದು (ಪೇತ್ರನು ಮಾತಾಡು ವಾಗ ಅವರು ತಮ್ಮ ತಲೆಗಳನ್ನು ಒಪ್ಪಿಗೆ ಸೂಚಿಸಿ ಅಲುಗಾಡಿಸುವದನ್ನು ನೋಡುತ್ತೇನೆ). ವಚನ 40ನ್ನು ನೋಡಿರಿ ("ಅವರನ್ನು ಎಚ್ಚರಿಸಿದನು"). ಮತ್ತು 41ರಲ್ಲಿ ("ಅವನ ಮಾತಿಗೆ ಒಪ್ಪಿಕೊಂಡವರು ದೀಕ್ಷಾಸ್ನಾನ ಮಾಡಿಸಿಕೊಂಡರು"). [3]"ಯೆರೂಸಲೇಮಿನಲ್ಲಿ" ವಾಸಿಸುತಿದ್ದವರು "ಆಕಾಶದ ಕೆಳಗೆ ಇರುವ ಸರ್ವ ರಾಷ್ಟ್ರದವರು ತಾತ್ಕಾಲಿಕವಾಗಿ ವಾಸಿಸುತ್ತಿದ್ದರು" (ವಚನ 5). [4]ಯೆಹೂದ್ಯರು ಮುಂಜಾವಿನಲ್ಲಿ ತಾಸುಗಳನ್ನು ಎಣಿಸುವದಕ್ಕೆ ಪ್ರಾರಂಭಿಸಿದರು ಅಂದರೆ ಸುಮಾರು ಬೆಳಿಗ್ಗೆ 6:00 ಘಂಟೆಯಿಂದ. ಮುಂಜಾವಿನ ಸಮಯದಲ್ಲಿ ವ್ಯತ್ಯಾಸವಾಗುವದರಿಂದ, ಬೆಳಿಗ್ಗೆ 9:00 ಘಂಟೆಯು ಹತ್ತಿರವಾಗಿದೆ. [5]ಅನೇಕರು ಬೆಳಿಗ್ಗೆ 10:00 ಘಂಟೆಗಿಂತ ಮುಂಚೆ ಹಬ್ಬದ ದಿನಗಳಲ್ಲಿ, ಉದಾಹರಣೆಗೆ, ಪಂಚಾಶತ್ತಮ ದಿನದಂದು ಊಟಮಾಡುತ್ತಿಲಿಲ್ಲ ಮತ್ತು ಇನ್ನು ಕೆಲವರು ಮಧ್ಯಾನಕ್ಕಿಂತ ಮುಂಚೆ ಊಟ ಮಾಡುತ್ತಿರಲಿಲ್ಲ. [6]ಪೇತ್ರನು ಸೆಪ್ಟುಯಜಿಂಟ್ ಅಥವಾ ಹಳೆ ಒಡಂಬಡಿಕೆಯ ಗ್ರೀಕ್ ಭಾಷಾಂತರದಿಂದ ಉಲ್ಲೇಖಿಸಿದನು (ಸೆಪ್ಟುಯಜಿಂಟ್ ಎಂಬ ಪದವನ್ನು ಪದ ಸಂಗ್ರಹದಿಂದ ನೋಡಿರಿ). ಅನೇಕ ವ್ಯಾಕ್ಯಾನಕಾರರು ಪೇತ್ರನ ಮಾತುಗಳು ಮತ್ತು ಸೆಪ್ಟುಯಜಿಂಟ್ ಏನು ಹೇಳುತ್ತದೋ ಅವುಗಳ ಮಧ್ಯದ ವ್ಯತ್ಯಾಸವನ್ನು ಗುರುತಿಸುವದರಲ್ಲಿ ಸಂತೋಷಿಸುತ್ತಾರೆ. ಬಹು ಜನರು ಎರಡು ಅಂಶಗಳನ್ನು ಅಲಕ್ಷಿಸುತ್ತಾರೆ: (1) ನಾವು ಪ್ರತಿಶತ 100%ರಷ್ಟು ಸೆಪ್ಟುಯಡಿಂಟ್‌ನ ಮೂಲ ಪರಿಚೇದವು ಏನು ಹೇಳುತ್ತದೆಂದು ನಿಖರವಾಗಿ ಹೇಳಲು ಸಾಧ್ಯವಿಲ್ಲ. ಪೇತ್ರನ ಮಾತುಗಳು ಮೂಲ ಭಾಗಕ್ಕಿಂತ ನಮ್ಮ ಬಳಿಯಿರುವ ಸೆಪ್ಟುಯಜಿಂಟ್‌ನ ಭಾಗಕ್ಕಿಂತಲೂ ಹತ್ತಿರವಾಗಿರಬಹುದು. (2) ಪೇತ್ರನು ದೇವರಿಂದ ಪ್ರೇರೇಪಿತ ನಾಗಿದ್ದನು. ಅವನ ಮಾತುಗಳು ಎಲ್ಲಿ ಸೆಪ್ಟುಯಜಿಂಟ್‌ನ ಮಾತುಗಳಿಗಿಂತ ವಿಭಿನ್ನವಾದಾಗ, ಪರಿಶುದ್ಧಾತ್ಮನು ಪದಗಳ ಅರ್ಥವನ್ನು ಪ್ರೇರೆಪಿತ ರೂಪವಾಗಿ ಕೊಡುತ್ತಾನೆ. [7]ನಮ್ಮ ಸತ್ಯವೇದದಲ್ಲಿ, ಯೋವೇಲ 2:28ರಲ್ಲಿ "ಅಂತ್ಯ ದಿನಗಳಲ್ಲಿ" ಎಂದು ಇಲ್ಲ, ಆದರೆ "ತರುವಾಯ" ಎಂದು ಇದೆ. "ತರುವಾಯ" ಎಂಬ ಪದವು ಸೂಚಿಸುವ ಸಮಯವು ಯೆಶಾಯ ಮತ್ತು ಮೀಕನು (ಯೆಶಾಯ 2:2; ಮೀಕ 4:1). "ಅಂತ್ಯ ದಿನಗಳು" ಎಂಬ ಪದಗಳು ಸೂಚಿಸುವದಕ್ಕೆ ಸಮಾನವಾಗಿದೆ. ಯೋವೇಲನು "ಅಂತ್ಯ ದಿನಗಳ" ಕುರಿತು ಮಾತಾಡುತ್ತಿದ್ದಾನೆ ಎಂದು ಪೇತ್ರನು ಪ್ರೇರೇಪಿಸಲ್ಪಟ್ಟವನಾಗಿ ನಮಗೆ ತಿಳಿಸುತ್ತಾನೆ. [8]ಪೇತ್ರನು ಯೆಹೂದ್ಯರ ಕೊನೆಯ ಕಾಲದ "ಅಂತ್ಯ ದಿನಗಳ" ಕುರಿತು ಮಾತಾಡುತ್ತಿರುವ ಸಾಧ್ಯತೆ ಇದೆ. ಆದರೆ,

ತರ್ಜುಮೆಯ ಒಂದು ಮೂಲ ತತ್ವವನೇನೆಂದರೆ, ಕೇಳುವವರಿಗೆ ಈ ಪದಗಳು ಏನು ಅರ್ಥ ಕೊಡುತ್ತವೆ ಎಂದು ಪ್ರಶ್ನಿಸಿ, "ಅಂತ್ಯ ದಿನಗಳು" ಎಂಬ ಪದವನ್ನು ಮೆಸ್ಸಿಯನ ಆಳ್ವಿಕೆಗೆ ಅನ್ವಯ ಮಾಡುವದು ಸೂಕ್ತವಾಗಿದೆ. [9]1 ಕೊರಿಂಥ 10:11; ಇಬ್ರಿಯ 9:26; 1 ಪೇತ್ರ 1:20; 1 ಯೋಹಾನ 2:18. [10]ಅನೇಕ ಪ್ರಿಮಿಲ್ಲೆನಿಯಲಿಸ್ಟಗಳು ಯೇಸುವಿನ ಒಂದು ಸಾವಿರ ವರ್ಷಗಳ ಕಲ್ಪಿತ ಆಳ್ವಿಕೆಯು ಯೆರೂಸಲೇಮಿನಲ್ಲಿ ಇನ್ನೂ ಬರಲಿದೆ ಎಂದು "ಅಂತ್ಯ ದಿನಗಳು" ಎಂಬ ಪದವನ್ನು ಉಪಯೋಗಿಸುತ್ತಾರೆ.

[11]ಪ್ರಿಮಿಲ್ಲೆನಿಯಲ್ ವ್ಯಾಖ್ಯಾನಕಾರರು ಯೋವೇಲನ ಹೇಳಿಕೆಯ ಬಲದಿಂದ ತಪಿಸಿಕೊಳ್ಳಲು ಕಷ್ಟಪಡುತ್ತಾರೆ. ಆದರೆ ಪೇತ್ರನು, "ಪ್ರವಾದಿಯಾದ ಯೋವೇಲನ ಮೂಲಕವಾಗಿ ಹೇಳಿಸಿದ ಸಂಗತಿ: ಕಡೆ ದಿವಸಗಳಲ್ಲಿ ..." ಎಂದು ಸರಳವಾಗಿ ಹೇಳಿದನು. ಅವನು "ಇದು ನನ್ನ ನೆನಪಿಗೆ ತರುತ್ತದೆ ..." ಎಂದೋ ಅಥವಾ "ಇದು ಇದಕ್ಕೆ ಸಮಾನವಾಗಿದೆ ..." ಎಂದೋ ಹೇಳಲಿಲ್ಲ, ಆದರೆ "ಇದು ..." ಎಂದು ಹೇಳಿದನು. [12]ಕೆಲವರು, ದೀಕ್ಷಾಸ್ನಾನವು ಮುಳುಗಿಸದಿದ್ದರೂ ಸರಿಯೆಂದು ಸಾಧಿಸುವದಕ್ಕಾಗಿ, ವಚನ 33 ರಲ್ಲಿ ಉಪಯೋಗಿಸಲ್ಪಟ್ಟ "ಸುರಿಸಿದ್ದಾನೆ" ಎಂಬ ಪದವನ್ನು ಹಿಡಿದುಕೊಳ್ಳುತ್ತಾರೆ. ಅವರು ಹೇಳುತ್ತಾರೆ: "ಇದು ಸುರಿಯುವದರ ಮೂಲಕವೂ ದೀಕ್ಷಾಸ್ನಾನವನ್ನು ನೆರವೇರಿಸಬಹುದು ಎಂದು ತೋರಿಸುತ್ತದೆ." ಅಪೊಸ್ತಲರ ಮೇಲೆ ಪರಿಶುದ್ಧಾತ್ಮನ ಬರುವಿಕೆಯ ಕುರಿತು ಉಪಯೋಗಿಸಲ್ಪಟ್ಟ ಎಲ್ಲಾ ಪದಗಳು ಅಲಂಕಾರಿಕವಾಗಿ ಉಪಯೋಗಿಸಲ್ಪಟ್ಟಿವೆ - "ಸ್ನಾನ" (1:5), "ಭರಿತರಾಗುವದು" (2:4), "ಸುರಿಸುವೆನು" (2:17). ಪರಿಶುದ್ಧಾತ್ಮನು ವ್ಯಕ್ತಿಯಾಗಿರುವದರಿಂದ, ಅವನು ಯಥಾವತ್ತಾಗಿ "ಸುರಿಯಲ್ಪಡಲು" ಸಾಧ್ಯವಿಲ್ಲ. ಈ ಅಂಶದ ಮೇಲೆ ಯಾರಾದರೂ ನನ್ನನ್ನು ಸವಾಲು ಮಾಡಿದರೆ, ನಾನೊಂದು ಲೋಟವನ್ನು ತೆಗೆದುಕೊಂಡು ಅದರಲ್ಲಿ ಒಂದು ಚಿಕ್ಕ ಕಲ್ಲನ್ನು ಹಾಕುವೆನು. ಅಪೊಸ್ತಲರ ಕೃತ್ಯಗಳು 1 ಮತ್ತು 2ರಲ್ಲಿ ಉಪಯೋಗಿಸಲ್ಪಟ್ಟ ಚಿತ್ರಕ್ಕೆ ಸಮಾನಾಂತರವಾಗಿ, ನಾನು ಆ ಲೋಟವು ತುಂಬುವಷ್ಟು ಮತ್ತು ಕಲ್ಲು ಮುಳುಗುವಷ್ಟು ಲೋಟದಲ್ಲಿ ನೀರನ್ನು ಹೊಯ್ಯುವೆನು. [13]ಅಪೊಸ್ತಲರ ಕೃತ್ಯಗಳಲ್ಲಿ ನಂತರ ಗಮನಿಸುವಂತೆ, ಪೇತ್ರ ಮತ್ತು ಪೌಲರು ಅನೇಕ ದರ್ಶನಗಳನ್ನು ಕಂಡರು (10:17; 16:9). "ಕನಸು" ಎಂಬ ಪದ ವಿಶಿಷ್ಟವಾಗಿ ನಮೂದಿಸುವದಿಲ್ಲ, ಆದರೆ ದರ್ಶನಗಳು ರಾತ್ರಿಯ ವೇಳೆಯಲ್ಲಿ ಉಂಟಾದವು (22:11; 27:23). ಬಹುಶಃ ಈ ರಾತ್ರಿಯ ದರ್ಶನಗಳು ಪ್ರೇರೇಪಿತ ಕನಸುಗಳಿಂದ ಬಂದಿರಬಹುದು. [14]ಯೋವೇಲ 2:29ರಲ್ಲಿ "ನನ್ನ" ಬದಲು "ಆ" ಎಂಬ ಪದವಿದೆ, "ದಾಸ ದಾಸಿಯರು" ಬಹುಶಃ ಇದು ಗುಲಾಮತ್ವವನ್ನು ಸೂಚಿಸಿರಬಹುದು. ಬೇರೆ ಮಾತುಗಳಲ್ಲಿ ಹೇಳುವದಾದರೆ, ಬಹುಶಃ ಇದು ಗುಲಾಮತ್ವದಲ್ಲಿದ್ದವರು ಕ್ರೈಸ್ತರಾದದ್ದನ್ನು ಸೂಚಿಸುತ್ತದೆ. [15]ಯೋವೇಲನು ಮಾತಾಡಿದ ಎಲ್ಲಾ ಸಂಗತಿಗಳು ಪಂಚಾಶತ್ತಮ ದಿನದಲ್ಲಿ ನಡೆಯಲಿಲ್ಲ. ಉದಾಹರಣೆಗೆ, ನಮಗೆ ತಿಳಿದಿರುವ ಮಟ್ಟಿಗೆ ಅಲ್ಲಿ ದರ್ಶನಗಳು ಅಥವಾ ಕನಸುಗಳು ಇರಲಿಲ್ಲ (ವಚನ 17). ಪಂಚಾಶತ್ತಮ ದಿನದಲ್ಲಿ ನಡೆದ ಘಟನೆಯು, ಯೋವೇಲನ ಪ್ರವಾದನೆಯ ನೆರವೇರುವಿಕೆಯ ಪ್ರಾರಂಭವೆಂದು ಪೇತ್ರನು ಹೇಳಿದನು. [16]ವರಗಳು "ಯೌವನಸ್ಥರು" (ವಚನ 17) ಮತ್ತು "ಗಂಡು ಮಕ್ಕಳು" ಮತ್ತು "ಹೆಣ್ಣು ಮಕ್ಕಳು" (ವಚನ 18) ಇಬ್ಬರಿಗೂ ವಾಗ್ದಾನ ಮಾಡಲ್ಪಟ್ಟಿತು. ಸ್ತ್ರೀಯರು ನಂತರ ಅದ್ಭುತ ಶಕ್ತಿಯನ್ನು ಪಡೆದರು (ಅಪೊಸ್ತಲರ 21:9). [17]"ಯೌವನಸ್ಥರು" ಮತ್ತು "ಹಿರಿಯರು" ಇಬ್ಬರಿಗೂ ವರಗಳನ್ನು ವಾಗ್ದಾನ ಮಾಡಲಾಯಿತು (ವಚನ 17). [18]ದಾಸ ದಾಸಿಯರು ಅದರಲ್ಲಿ ಒಳಗೊಂಡಿದ್ದಾರೆ (ವಚನ 18). [19]ಮೂಲ ಭಾಗದಲ್ಲಿ "ಎಲ್ಲಾ ಜೀವಿಗಳ ಮೇಲೆ" ಎಂದಿದೆ (KJV ಯನ್ನು ನೋಡಿರಿ). ಅದರಲ್ಲಿ ಪ್ರಾಣಿಗಳು, ಮೀನು ಮತ್ತು ಪಕ್ಷಿಗಳು ಒಳಗೊಂಡಿವೆ (1 ಕೊರಿಂಥ 15:39)! [20]"ಪ್ರವಾದಿ" ಎಂಬ ಪದವನ್ನು ಪದಸಂಗ್ರಹದಲ್ಲಿ ನೋಡಿರಿ.

[21]ಹಳೆ ಒಡಂಬಡಿಕೆಯಲ್ಲಿ ಅನೇಕ ಭವಿಷ್ಯತ್ತಿನ ಕುರಿತು ಪ್ರವಾದನಾ ಭಾಷೆ ಕಂಡುಬರುತ್ತದೆ. ಉದಾಹರಣೆಗೆ ದಾನಿಯೇಲ 7-12. ಈ ರೀತಿಯ ಭಾಷೆಯ ಗಮನಾರ್ಹ ವಾದ ಉದಾಹರಣೆಯು ಪ್ರಕಟನೆಗಳ ಪುಸ್ತಕದಲ್ಲಿದೆ. ಮೂಲ ಭಾಗದಲ್ಲಿ, ಪ್ರಕಟನೆಯ ಪುಸ್ತಕವು, "ಯೇಸುವಿನ ಪ್ರಕಟನೆಯು" ಎಂದಿದೆ. [22]Anthony Lee Ash, *The Acts of the Apostles*, Part 1, The Living Word Commentary, ed. Everett Ferguson (Austin, Tex.: Sweet Publishing Co., 1979), 48. [23]ಪ್ರಕಟನೆ 6:12-14ರಲ್ಲಿ ಅದೇ ಭಾಷೆಯನ್ನು "ಕೋಪವು ಕಾಣಿಸುವ ಮಹಾ ದಿನ ..." ಎಂದು ಸೂಚಿಸುವದಕ್ಕೆ ಉಪಯೋಗಿಸಲಾಗಿದೆ. ಜಗತ್ತಿನ ಅಂತ್ಯವನ್ನು ಇದು ಸೂಚಿಸುತ್ತದೆ ಎಂದು ನಾನು ನಂಬುತ್ತೇನೆ. ಕೆಲವರು ಇದನ್ನು ರೋಮ ಸಾಮ್ರಾಜ್ಯದ ಮೇಲೆ ತಾತ್ಕಾಲಿಕ ನ್ಯಾಯ ತೀರ್ಪು ಎಂದು ನಂಬುತ್ತಾರೆ. 2 ಪೇತ್ರ 3:10 ರಲ್ಲಿಯೂ ಅದೇ ಭಾಷೆಯನ್ನು ಉಪಯೋಗಿಸಲಾಗಿದೆ, ಅಲ್ಲಿ ಅದು ಜಗತ್ತಿನ ಅಂತ್ಯವನ್ನು ನಿಜವಾಗಿಯೂ ಸೂಚಿಸುತ್ತದೆ. [24]ಪಾಠದಲ್ಲಿ ಗಮನಿಸಲ್ಪಟ್ಟ ಎರಡು ನಿಲುವುಗಳ ಹೊರತಾಗಿ, ಕ್ರಿ.ಶ 70ರಲ್ಲಿ ಯೆರೂಸಲೇಮಿನ ನಾಶನವನ್ನು ಯೋವೇಲನು ಸೂಚಿಸುತ್ತಾನೆ ಎನ್ನುವ

ಸಾಧ್ಯತೆ ಇದೆ. ಆ ದಿನದಲ್ಲಿ, ಯೆರೂಸಲೇಮಿನಲ್ಲಿದ್ದವರಲ್ಲಿ ಯಾರ್ಯಾರು "ಕರ್ತನ ನಾಮವನ್ನು ಹೇಳಿ ಕೊಳ್ಳುವವರು" ನಾಶನದಿಂದ ರಕ್ಷಿಸಲ್ಪಟ್ಟರು. ಮತ್ತಾಯ 24:15, 16ರಲ್ಲಿ ಯೇಸುವಿನ ಪ್ರವಾದನೆಯಿಂದ ಎಚ್ಚರಿಸಲ್ಪಟ್ಟರೋ ಅವರು, ರೋಮಾದವರು ಸಮೀಪಿಸಿದಾಗ ಪಟ್ಟಣವನ್ನು ಬಿಟ್ಟು ಓಡಿಹೋದರು. ಈ ನಿಲುವು ಈ ಪರಿಚ್ಛೇದಕ್ಕೆ ಅನ್ಯಾಯ ಮಾಡುವದಿಲ್ಲ, ಅದರೆ ನಾನು ಈ ಪಾಠದಲ್ಲಿ ಗಮನಿಸಲ್ಪಟ್ಟ ನಿಲುವನ್ನು ಇಷ್ಟಪಡುತ್ತೇನೆ. [25]ಯೋವೇಲನು ಪ್ರವಾದಿಸಿದ ಎಲ್ಲಾ ಸಂಗತಿಗಳು ಆ ದಿನ ನೆರವೇರಲಿಲ್ಲ. ಪಂಚಾಶತ್ತಮ ದಿನದಿಂದ ಹಿಡಿದು ಅಂತ್ಯದ ವರೆಗೆ ಇರುವ ಕ್ರಿಸ್ತೀಯ ಕಾಲದ ಸಂಪೂರ್ಣ ಚಿತ್ರದ ಅಲ್ಪ ಸಮೀಕ್ಷೆ ಯನ್ನು ಯೋವೇಲನ ಪ್ರವಾದನೆ ಪ್ರಕಟಿಸಿದೆ ಎಂದು 19ರಿಂದ 21ರ ವರೆಗಿನ ವಚನಗಳು ಜಗತ್ತಿನ ಅಂತ್ಯವನ್ನು ಸೂಚಿಸುತ್ತದೆ ಎಂಬ ದೃಷ್ಟಿಕೋನದ ಅನುಕೂಲವಾಗಿದೆ. [26]ವಚನಗಳು 19 ಮತ್ತು 20ರಲ್ಲಿನ ಘಟನೆಯು ಯೇಸು ಶೂಲುಬೆಯ ಮೇಲೆ ಇದ್ದಾಗ ಮತ್ತು ಸೂರ್ಯನು ಕತ್ತಲಾದಾಗ ಅಲ್ಪ ರೀತಿಯಲ್ಲಿ ಪುನರಾವರ್ತಿಸಿತು ಎಂದು ಕೆಲವು ವ್ಯಾ ಖ್ಯಾನಕಾರರು ಹೇಳುತ್ತಾರೆ. ಯೇಸುವಿನ ಮರಣದ ಸುತ್ತಲೂ ನಡೆದ ಘಟನೆಗಳು, ಯೋವೇಲನ ಪ್ರವಾದನೆಯ ಭಾಗಶ ನೆರವೇ ರಿಕೆಯಾಗಿತ್ತು. [27]"ಕರ್ತನ ನಾಮವನ್ನು ಹೇಳಿಕೊಳ್ಳುವವರೆಲ್ಲರಿಗೆ" ಎಂದು ಹೇಳುವಾಗ ಅದು ಬಾಯಿಯಿಂದ ಹೇಳುವದಕ್ಕಿಂತಲೂ ಹೆಚ್ಚಿನದಾಗಿತ್ತು (ಮತ್ತಾಯ 7:21). ಉತ್ತಮವಾದ ಇನ್ನೊಂದು ವಾಕ್ಯವು ಅಪೊಸ್ತಲರ ಕೃತ್ಯಗಳು 22:16ರಲ್ಲಿದೆ, ಅನನೀಯನು ಸೌಲನಿಗೆ, "ಎದ್ದು ಆತನ ಹೆಸರನ್ನು ಹೇಳಿ ಕೊಳ್ಳುವವನಾಗಿ ದೀಕ್ಷಾಸ್ನಾನ ಮಾಡಿಸಿಕೊಂಡು ನಿನ್ನ ಪಾಪಗಳನ್ನು ತೊಳೆದುಕೊ" ಅಂದನು. [28]"ನಜರೇತಿನ" ಅಂದರೆ ಯೇಸು ನಜರೇತ್ ಊರಿನವನಾಗಿದ್ದನು (KJV, NIVಯನ್ನು ನೋಡಿರಿ). ಆ ದಿನಗಳಲ್ಲಿ "ಯೇಸು" ಒಂದು ಸಾಮಾನ್ಯ ನಾಮವಾಗಿತ್ತು. ಪೇತ್ರನು "ನಜರೇತ್" ಎನ್ನು ವಾಗ, ಇದು ಯಾವ ಯೇಸುವನ್ನು ಸೂಚಿಸುತ್ತಿದ್ದೇನೆ ಎಂದು ಹೇಳು ವದಕ್ಕೆ ಅದನ್ನು ಉಪಯೋಗಿ ಸಿದನು. [29]"ಮಹತ್ತುಗಳು," "ಅದ್ಭುತಗಳು" ಮತ್ತು "ಸೂಚಕಕಾರ್ಯಗಳು" ಇವು ಹೊಸ ಒಡಂಬಡಿಕೆ ಸೂಚಿಸುವ ಮೂರು ರೀತಿಯ ಅದ್ಭುತ ಕಾರ್ಯಗಳು. "ಮಹತ್ತುಗಳು" ಎಂಬ ಪದವು ಗ್ರೀಕ ಪದದಿಂದ ಭಾಷಾಂತರಗೊಂಡಿದೆ, ಅದರ ಮೂಲ ಅರ್ಥ "ಬಲ." "ಮಹತ್ತು" ಎಂಬ ಪದವು ಈಗಾಗಲೇ ಮಾಡಲ್ಪಟ್ಟದ್ದನ್ನು ಸೂಚಿಸುತ್ತದೆ. "ಅದ್ಭುತಗಳು" ಎಂಬ ಪದವು ಜನರ ಮೇಲೆ ಈ ಮಹತ್ತುಗಳ ಪ್ರಭಾವವನ್ನು ಸೂಚಿಸುತ್ತದೆ. ಅದನ್ನು ಮಾಡುವವರೊಂದಿಗೆ ದೇವರು ಇದ್ದಾನೆಂದು ಅದು ಸೂಚನೆಯಾಗಿತ್ತು (ಇಬ್ರಿಯ 2:4). [30]ಬೆಲ್ಜಬೂಲನ ಸಹಾಯದಿಂದ ಮಹತ್ಕಾರ್ಯಗಳನ್ನು ಯೇಸು ಮಾಡುತ್ತಾನೆಂದು ಫರಿಸಾಯರು ಅಪಾದಿಸಿದರು (ಮತ್ತಾಯ 12:24), ಆದರೆ ಆತನೆ ಮಹತ್ತುಗಳನ್ನು ಮಾಡಿದನೆಂದು ಅವರು ಅಲ್ಲಗ ಳೆಯಲಿಲ್ಲ (ಲೂಕ 11:15).

[31]ಸಾಮಾಧಿಯಲ್ಲಿ ನೋಡಬೇಕೆನ್ನುವ ಯಾರಿಗೂ ಅದು ಸರಳವಾಗಿತ್ತು. (ಯೋಹಾನ 20:5) [32]ನಾನು ಇದನ್ನು ಬರೆಯುತ್ತಿದ್ದ ಹಾಗೆ, ಅಮೇರಿಕೆಯಲ್ಲಿ ಒಂದು ಕೊಲೆಯ ವಿಷಯದಲ್ಲಿ ಒಬ್ಬ ಪ್ರಖ್ಯಾತ ಆಟಗಾರರು ವಿಚಾರಣೆಯಲ್ಲಿದ್ದಾರೆ. ಅಮೇರಿಕೆಯಲ್ಲಿದ್ದು ಈ ಮನುಷ್ಯನ ಹೆಸರನ್ನು ಮತ್ತು ಅವನ ರೀ ತಿಯಲ್ಲಿ, ಸಕಾರಾತ್ಮಕವಾಗಿಯೇ ಇರಲಿ ಅಥವಾ ನಕಾರಾತ್ಮಕವಾಗಿಯೇ ಇರಲಿ ಯೆರೂಸಲೇಮಿನಲ್ಲಿ ಪ್ರತಿಯೊಂದು ನಾಲಿಗೆಯ ಮೇಲೆ ಬಹುಶಃ ಯೇಸುವಿನ ಹೆಸರು ಇತ್ತು. [33]ಮತ್ತೆ ಪೇತ್ರನು ಪಾಲೇಸ್ತೀ ನಿನಲ್ಲಿ ವಾಸಿಸುತ್ತಿದ್ದ ಜನರತ್ತ ಕೈ ಮಾಡಿ ತೋರಿಸಿರಬಹುದು, ಆದರೆ ಯೆಹೂದ್ಯರು ಒಂದು ರಾಷ್ಟ್ರವಾಗಿ ಯೇಸುವನ್ನು ತಿರಸ್ಕರಿಸಿದ್ದಾರೆಂಬ (ಯೋಹಾನ 1:11) ಸತ್ಯವನ್ನು ಅವನು ಒತ್ತಿ ಹೇಳಿದನು. ಆದುದರಿಂದ ಅವರು ಎಲ್ಲಿಯೇ ವಾಸಿಸಲಿ, ಎಲ್ಲರೂ "ಆತನನ್ನು ಶೂಲುಜೆ ಹಾಕುವಲ್ಲಿ" ಅಪರಾಧಿಗಳಾ ಗಿದ್ದರು. [34]ಮೂಲ ಭಾಗದಲ್ಲಿ "ನಿಯಮವಿಲ್ಲದವರು" ಎಂದಿದೆ. ಬಹುಶಃ ಇದು ದೇವರ ಧರ್ಮಶಾಸ್ತ್ರವಿಲ್ಲದವರನ್ನು ಸೂಚಿಸಿರಬಹುದು (ಅಂದರೆ ಅನ್ಯರು). ರೋಮದ ಸೈನಿಕರು ನಿಜವಾಗಿಯೂ ಯೇಸುವನ್ನು ಶೂಲುಜೆಗೆ ಹಾಕಿದರು, ಆದರೆ ಹಾಗೆ ಮಾಡುವಾಗ ಅವರು ಯೆಹೂದ್ಯ ಜನರ ಚಿತ್ತವನ್ನು ಮಾಡಿದರು. ಆದುದರಿಂದ ಪೇತ್ರನು "ನೀವು ಆತನನ್ನು ಶೂಲುಜೆಗೆ ಹಾಕಿದಿರಿ" ಎಂದು ಹೇಳಿದನು. [35]ದೇವರ ಭವಿಷ್ಯದ್ ಜ್ಞಾನದ ವಿಷಯಕ್ಕಿಂತಲೂ ಕೆಲವು ಸತ್ಯವೇದದ ವಿಷಯಗಳು ಇನ್ನೂ ಹೆಚ್ಚಿನ ಸವಾಲುಳ್ಳದ್ದಾಗಿದೆ. ಮುಂದಾಗುವ ಸಂಗತಿಗಳನ್ನು ಒಳಗೊಂಡು, ದೇವರು ಎಲ್ಲವನ್ನೂ ಬಲ್ಲನು ಎಂಬ ಸತ್ಯವು, ಮನುಷ್ಯನ ಸ್ವತಂತ್ರ ನೈತಿಕತೆಯ ಕುರಿತ ಸತ್ಯವೇದದ ಬೋಧನೆಯೊಂದಿಗೆ ಹೇಗೆ ಹೊಂದಾಣಿಕೆಯಾಗುತ್ತದೆ. ದೇವರಿಗೆ ಎಲ್ಲವೂ ತಿಳಿದಿರುವದರಿಂದ, ಏನಾಗುತ್ತದೆಂದು ಆತನಿಗೆ ಗೊತ್ತಿರುವ ಅಂಶವು ವೈಯಕ್ತಿಕ ಜವಾಬ್ದಾರಿಯನ್ನು ಮತ್ತು ನಿನ್ನೆ ಏನಾಯಿತೆಂದು ನಾನು ತಿಳಿದಿರುವ ಅಂಶವನ್ನು ಕಡಿಮೆಗೊಳಿಸಲು ಸಾಧ್ಯವಿಲ್ಲವೆಂದು ಮಾತ್ರ ನಾನು ಹೇಳಬಹುದು. ಈ ಕಷ್ಟದಲ್ಲಿ ನಾವು ಹೋರಾಡುವಾಗ, ಪೇತ್ರನು ಮತ್ತು ಅವನ ಶ್ರೋತೃಗಳು ಈ ವಿವಾದದ ಕುರಿತು ಯಾವ ಕಷ್ಟಪಡಲಿಲ್ಲ. [36]ಯೇಸು ತನ್ನ ಮರಣವನ್ನು ಮತ್ತು ಪುನರುತ್ಥಾನವನ್ನು ಮುಂತಿಳಿಸಿದ್ದರೂ, ಆತನು ಮರಣಹೊಂದಿದಾಗ ಭಾವಿಸಿದರು (ಮಾರ್ಕ 8:31; 9:12, 31; 10:33; ಲೂಕ 17:25; 18:31-33). [37]ಬಾಧೆಯನ್ನು ಅನುಭವಿಸುವ ಒಬ್ಬ

ಸೇವಕಾನಾಗಿ (ಪ್ರವಾದಿಗಳು ಮುಂತಿಳಿಸಿದಂತೆ) ಯೇಸುವನ್ನು ಕುರಿತು ಪೇತ್ರನು ದಾಖಲಾಗಿರುವ ತನ್ನ ಎರಡನೇಯ ಪ್ರಸಂಗದಲ್ಲಿ ಒತ್ತಿಹೇಳಿದ್ದಾನೆ (3:18). ಪೇತ್ರನು ತನ್ನ ಮೊದಲ ಪ್ರಸಂಗದಲ್ಲಿ ಏನು ಹೇಳಿದ್ದಾನೋ ಅದರ ಸಂಕ್ಷಿಪ್ತ ವಿವರಣೆಯು ಅಪೊಸ್ತಲರ ಕೃತ್ಯಗಳು 2:40 ರಲ್ಲಿದೆ. ಅಪೊಸ್ತಲರ ಕೃತ್ಯದಲ್ಲಿ ಸಮಾಚಾರವನ್ನು ಪುನರಾ ವರ್ತಿಸದಿರುವದು ಲೂಕನ ಪದ್ಧತಿಯಾಗಿತ್ತು, ಆದರೆ ಅವನು ನಂತರ ಸಹಾಯಕ ಸಮಾಚಾರವನ್ನು ಕೊಟ್ಟನು. ತನ್ನ ಮೊದಲ ಪ್ರಸಂಗದಲ್ಲಿ, ಪೇತ್ರನು ಬಹುಶಃ ತನ್ನ ಎರಡನೇಯ ಪ್ರಸಂಗದಲ್ಲಿನ (ಅಪೊಸ್ತಲರ ಕೃತ್ಯಗಳು 3) ಮತ್ತು ಕೊರ್ನೇಲ್ಯನ ಮನೆಯವರಿಗೆ ಹೇಳಿದ ಪ್ರಸಂಗದಲ್ಲಿನ ಬಹಳಷ್ಟು ವಿಷಯಗಳನ್ನು ಹೇಳಿದ್ದಾನೆ (ಅಪೊಸ್ತಲರ ಕೃತ್ಯಗಳು 10). [38]ಪುನರುತ್ಥಾನದಲ್ಲಿ ವಿಶ್ವಾಸವಿಡದವರಿಂದ ಈ ಪ್ರಶ್ನೆ ಉತ್ತರಿಸಲ್ಪಡಬೇಕು. ಕ್ರೈಸ್ತತ್ವವನು ನಾಶ ಮಾಡಲು, ಆ ವೈರಿಗಳು ಗುಂಪು ಕೇವಲ ಯೇಸುವಿನ ದೇಹವನ್ನು ತೋರಿಸಿದರೆ ಸಾಕಿತ್ತು. ಆವರಿಗೆ ಅದನ್ನು ಮಾಡಲು ಸಾಧ್ಯವಾಗಲಿಲ್ಲ. ಯೇಸುವಿನ ದೇಹವನ್ನು ಕದ್ದುಕೊಂಡು ಹೋಗದಂತೆ ಎಲ್ಲಾ ಎಚ್ಚರಿಕೆಯನ್ನು ಮಾಡಲಾಗಿತ್ತು ಎಂದು ಎಲ್ಲರಿಗೂ ತಿಳಿದಿತ್ತು. ಮರುದಿನ ಬೆಳಿಗ್ಗೆ, ಸಮಧಿಯು ಖಾಲಿಯಾಗಿತ್ತು ಎನ್ನುವದೂ ಸಾಮಾನ್ಯ ತಿಳುವಳಿಕೆಯಾಗಿತ್ತು. ದೇಹವು ಏನಾಯಿತು? ಯೇಸುವಿನ ಸ್ನೇಹಿತರು ಅದನ್ನು ತೆಗೆದುಕೊಂಡು ಹೋಗಿರಲಿಕ್ಕಿಲ್ಲ. ಆದಾಗ್ಯೂ ಅದು ಹೋಗಿತ್ತು. ಪೇತ್ರನು, ಈ ಎಲ್ಲ ಗಲಿಬಿಲಿಗೆ ಉತ್ತರವು ಬಹು ಸರಳವಾಗಿದೆ ಎಂದು ಹೇಳಿದನು: ಯೇಸುವು ತಾನು ಮುಂತಿಳಿಸಿದಂತೆ ಎಬ್ಬಿಸಲ್ಪಟ್ಟನು. [39]ಮೂಲ ಭಾಗವನ್ನು ಆರ್ ಎಸ್ ವಿ ಭಾಷಾಂತರವು ಉಳಿಸಿಕೊಂಡಿದೆ. [40]ಹೇಳಿಗೆಯು ಜಟಿಲವಾಗಬಹುದು, ಆದರೆ ಸಾಮಾನ್ಯ ಪರಿಸ್ಥಿತಿಯಲ್ಲಿ, ಈ ಹೇಳಿಕೆಯು ಸತ್ಯವಾ ಗಿದೆ.

[41]ಪುನರುತ್ಥಾನದ ಬೇರೆ ಯಾವ ಪುರಾವೆ ಇರದಿದ್ದರೆ, ಅಪೊಸ್ತಲರ ಜೀವನದಲ್ಲಿ ಆದ ಆಶ್ಚರ್ಯಕರವಾದ ಬದಲಾವಣೆಯೇ ಸಾಕು. ಅವರು ಮುಖಾಮುಖಿಯಾಗಿ ಪುನರುತ್ಥಾನ ವಾದ ಯೇಸುವನ್ನು ನೋಡಿದ್ದರಿಂದ ಆ ಬದಲಾವಣೆ ಸಾಧ್ಯವಾಯಿತೇ ಹೊರತು ಇನ್ನಾವದರಿಂದಲೂ ಅಲ್ಲ. [42]ಅಪೊಸ್ತಲರ ಕೃತ್ಯಗಳು 2ರಲ್ಲಿ ಪ್ರಸಂಗದಲ್ಲಿ, ಪೇತ್ರನು ಮೋಶೆ, ಯೆಶಾಯ ಮತ್ತು ಇತರರ ಪ್ರವಾದನೆಗಳನ್ನು ಉಲ್ಲೇಖಿಸಿದ್ದಾನೆ. ಮೊದಲ ಪ್ರಸಂಗದಲ್ಲಿ, ಪೇತ್ರನು ಬಹುಶಃ, ಲೂಕನು ದಾಖಲಿಸದ ಇತರ ಪ್ರವಾದನೆಗಳನ್ನು ಉಲ್ಲೇಖಿಸಿದ್ದಾನೆ. ಹೇಗೂ ದಾವೀದನ ಬರವಣಿಗೆಯು ಪೇತ್ರನ ಈ ಪ್ರಸಂಗದ ಮೂಲ ಪ್ರಸ್ತಾವನೆಯಾಗಿತ್ತು. [43]ಕೀರ್ತನೆ 16:8-11. ಪೇತ್ರನು ಸೆಪ್ಟ್ಯುಜಿಂಟ್‌ನಿಂದ ಉಲ್ಲೇಖಿಸಿದ್ದಾನೆ, ಆದುದರಿಂದ ನೀವು ಹಳೆ ಒಡಂಬಡಿಕೆಯಲ್ಲಿ (ಇದು ಇಬ್ರಿಯ ಭಾಷೆಯಿಂದ ಭಾಷಾಂತರಿಸಲ್ಪಟ್ಟಿದೆ) ಈ ಭಾಗವು ಇರುವದಕ್ಕಿಂತ ಸ್ವಲ್ಪ ವ್ಯತ್ಯಾಸವನ್ನು ಕಾಣುವಿರಿ. [44]ಮೂಲ ಭಾಗದಲ್ಲಿ *psuche* ಎಂದಿದೆ, ಇದು "ಆತ್ಮ" ಎಂಬ ಪದ. [45]KJVಯಲ್ಲಿ ದುರದೃಷ್ಟಕರವಾಗಿ "ನರಕ" ಎಂಬ ಭಾಷಾಂತರವಿದೆ. ಮೂಲ ಪರಿಚ್ಛೇದದಲ್ಲಿ "Gehenna" ಎಂದಿಲ್ಲ (ದೃಷ್ಟರ ನಿತ್ಯದ ಬಿಡಾರ, ಅಂದರೆ ನರಕ), ಆದರೆ "ಹೇಡಿಸ್" ಎಂದಿದೆ. "ಹೇಡಿಸ್" ಮತ್ತು "ನರಕ" ಇದನ್ನು ಪದ ಸಂಗ್ರಹದಲ್ಲಿ ನೋಡಿರಿ. [46]ಈ ಪದವು ದಾವೀದನಿಗೆ ಅನ್ವಯಿಸುವದಕ್ಕೆ ಸಾಮನ್ಯ ಪದವಲ್ಲ. ಬಹುಶ ದಾವೀದನು ಇಸ್ರಾಯೇಲಿನ ಆತ್ಮಿಕ ಪಿತೃಗಳಲ್ಲಿ ಒಬ್ಬನು ಎಂದು ಪೇತ್ರನು ಒತ್ತುಕೊಟ್ಟು ಹೇಳಿದನು ಅಥವಾ ದಾವೀದನು ಬಹುಶ ರಾಜವಂಶಕ್ಕೆ ಮೂಲ ಪಿತೃ ಎನ್ನುವ ಅಂಶವನ್ನು ಸೂಚಿಸುತ್ತವೆ. [47]1 ಅರಸು 2:10 ಮತ್ತು ನಹೂಮ 3:16 ಗಮನಿಸಿರಿ. ದಾವೀದನ ಸಮಾಧಿಯ ದ್ವಾರದಲ್ಲಿ ಹೆ ರೋದನು ಒಂದು ಬಿಳಿ ಸಂಗಮವರಿ ಕಲ್ಲಿನ ಸ್ಮಾರಕವನ್ನು ಕಟ್ಟಿಸಿದ್ದನು. ಅದು ಪಟ್ಟಣದಲ್ಲಿ ಎದ್ದು ಕಾಣುತ್ತಿತ್ತು. [48]ದಾವೀದನ ಜೀವನದಲ್ಲಿ ಇದು ಬಹು ಆಕರ್ಷಕ ವಿಷಯವಾಗಿತ್ತು. ನಾವು ಹಳೆ ಒಡಂಬಡಿಕೆಯಲ್ಲಿ ದಾವೀದನ ಕತೆಯನ್ನು ಕಲಿಯುವಾಗ ಅದನ್ನು ತಪ್ಪಿಸಿಕೊಳ್ಳುವದು ಬಹು ಸರಳವಾಗಿದೆ. ದಾವೀದನ ಮೇಲೆ ದೇರಾತ್ಮನು ಬಂದನು ಎಂದು 1 ಸಮುವೇಲ 16:13 ಸ್ಪಷ್ಟವಾಗಿ ತಿಳಿಸುತ್ತದೆ (2 ಸಮುವೇಲ 23:2 ನೋಡಿರಿ). ಆದರೆ ಹಳೆ ಒಡಂಬಡಿಕೆಯಲ್ಲಿ ದಾವೀದನ ಕುರಿತು "ಪ್ರವಾದಿ" ಎಂಬ ಪದವಿಲ್ಲ. ಆದರೆ ದಾವೀದನು ಒಬ್ಬ ಪ್ರವಾದ ಎಂದು ಯೆಹೂದ್ಯರು ಅರ್ಥ ಮಾಡಿಕೊಂಡಿದ್ದರು ಮತ್ತು ಹೊಸ ಒಡಂಬಡಿಕೆಯಲ್ಲಿ, ಹಳೆ ಒಡಂಬಡಿಕೆಯ ಪುಸ್ತಕಗಳಿಗಿಂತ ಕೀರ್ತನೆಗಳು ಹೆಚ್ಚು ಉಲ್ಲೇಸಲ್ಪಟ್ಟಿವೆ. [49]ಕೀರ್ತ 132:11 ನೋಡಿರಿ. ಸೊಲೊಮೊನನ ಆಳ್ವಿಕೆಯ ತರುವಾಯ ಯೆಹೂದ್ಯ ದಕ್ಷಿಣದ ರಾಜ್ಯಗಳನ್ನು ಆಳಿದ ದಾವೀದನ ವಂಶಸ್ತರ ಕಾಲದಲ್ಲಿ 2 ಸಮುವೇಲ 7ರ ವಾಗ್ದಾನಗಳು ಭಾಗಶಃ ನೆರವೇರಿದವು. ಸಂಪೂರ್ಣ ಮತ್ತು ಕೊನೆಯ ನೆರವೇರುವಿಕೆಯು, ಯೇಸು (ದಾವೀದನ ವಂಶಿಕನು ಮತ್ತಾಯ 1:1-16) ಪರಲೋಕಕ್ಕೇರಿ ದೇವರ ಬಲಗಡೆಯಲ್ಲಿ ಕೂತುಕೊಂಡಾಗಲೇ ಆಗುವದು (2:33). [50]ಅಪೊಸ್ತಲರ ಕೃತ್ಯಗಳಲ್ಲಿ ಈ ಪದವು ಉಪಯೋಗಿಸಲ್ಪಡುವದು ಇದು ಮೊದಲ ಬಾರಿ. ಇಬ್ರಿಯ ಪದ "ಮೆಸ್ಸಿಯನು" ಇದರ ಗ್ರೀಕ ಪದ "ಕ್ರಿಸ್ತನು." ಎರಡರ ಅರ್ಥವು "ಅಭಿಷಿಕ್ತನು." "ಕ್ರಿಸ್ತನು" ಇದನ್ನು ಪದ ಸಂಗ್ರಹದಲ್ಲಿ ನೋಡಿರಿ.

[51]ದಾವೀದನು ತಾನು ಬರೆದ್ದದರ ಪೂರ್ಣ ಅರ್ಥವನ್ನು ಗ್ರಹಿಸಿರಲಿಕ್ಕಿಲ್ಲ. ಪ್ರವಾದಿಗಳು, ಪ್ರೇರೇಪಿ

ಸಲ್ಪಟ್ಟವರಾಗಿ ಮಾತಾಡಿದ ವಿಷಯಗಳು ಬಹು ಕಾಲದ ನಂತರ ಪ್ರೇರೇಪಿಸಲ್ಪಟ್ಟ ಒಬ್ಬ ವ್ಯಕ್ತಿಯು ತರ್ಜುಮೆ ಮಾಡಿದಾಗಲೇ ಅರ್ಥವಾಗುತ್ತಿತ್ತು. [52]ಯೇಸುವಿನ ದೇಹವು ಸಮಾಧಿಯಲ್ಲಿದ್ದ ಕಾಲವು ಒಂದು ಪೂರ್ಣ ದಿನ ಮತ್ತು ಎರಡು ದಿನಗಳ ಸ್ವಲ್ಪ ಕಾಲ. ಯೆಹೂದ್ಯರ ಪ್ರಕಾರ ಇದು ಮೂರು ದಿನಗಳಾಗುತ್ತಿತ್ತು. [53]ಕೆಲವು ಭಾಷಾಂತರಗಳಲ್ಲಿ, ಉದಾಹರಣೆಗೆ NIV, "ಹೇಡಿಸ್" ಎಂಬ ಪದವನ್ನು "ಸಾಮಾಧಿ" ಎಂದು ಕರೆಯಲಾಗಿದೆ. ಕೀರ್ತನೆ 16ರ ಇಬ್ರಿಯ ಭಾಗದಲ್ಲಿ "ಶ್ಗೋಲ್" ಎಂದಿರುವಾಗ, ಅದು ಸಮಾಧಿಯನ್ನು ಸೂಚಿಸುತ್ತದೆ. ಆದುದರಿಂದ ಕ್ರಿಸ್ತನ ದೇಹವು ಸಮಾಧಿಯಲ್ಲಿ ಉಳಿಯುವದಿಲ್ಲ ಮತ್ತು ಅವನ ದೇಹವು ಕೊಳೆಯುವದಿಲ್ಲ ಎಂದು ದಾವೀದನು ಹೇಳಿದ ಹಾಗಾಯಿತು. ನಾನು ವಚನ 27ರಲ್ಲಿ "ಹೇಡಿಸ್" ನ ಅರ್ಥವು "ಕಾಣದ ಜಗತ್ತು" ಎಂದಿರುವದನ್ನು ಅನುಮೋದಿಸುತ್ತೇನೆ. [54]ಸತ್ಯವೇದದಲ್ಲಿ ಕೆಲರು ಮಾತ್ರ ಸತ್ತವರೊಳಗಿಂದ ಎಬ್ಬಿಸಲ್ಪಟ್ಟರು, ಸಮಾಧಿಯಿಂದ ಅವರ "ಪಾರಾಗುವಿಕೆಯು" ಮತ್ತು ಹೇಡಿಸ್ ಕೇವಲ ತಾತ್ಕಾಲಿಕವಾಗಿದ್ದುದರಿಂದ, ಅವರು ಮತ್ತೆ ಮರಣಹೊಂದಿದರು, ಹೀಗೆ ಅವರ ದೇಹಗಳು ಸಮಾಧಿಯಲ್ಲಿ "ಸೆರೆಯಲ್ಲಿದ್ದವು," ಅವರ ಆತ್ಮಗಳು ಹೇಡಿಸಿನಲ್ಲಿದ್ದವು. ಯೇಸು ಒಬ್ಬನೇ ಮತ್ತೆ ಸಾಯದಂತೆ ಎಬ್ಬಿಸಲ್ಪಟ್ಟನು. [55]ಜಗತ್ತಿಗೆ ಸಂಬಂಧಿಸಿ, ಅವರಿಗೆ ಕಷ್ಟಗಳು ಮತ್ತು ಪರಿಶೋಧನೆಗಳು ಇವೆ ಎಂದು ಯೇಸು ವಾಗ್ದಾನ ಮಾಡಿದ್ದನು (ಯೋಹಾನ 15:18-21). ಯೇಸು ಮುಂತಿಳಿಸಿದ್ದ ಹಿಂಸೆಯು ಬಹು ಬೇಗನೆ ಪ್ರಾರಂಭವಾಗುವದಕ್ಕಿತ್ತು (ಅಪೊಸ್ತಲರ ಕೃತ್ಯಗಳು 4:1-3). ಅಂತ್ಯದಲ್ಲಿ, ಪೇತ್ರನ ಎದುರು ನಿಂತು ಕೇಳುತಿದ್ದವರಲ್ಲಿ, ಅವರ ನಂಬಿಕೆಗಾಗಿ ಒಬ್ಬನನ್ನು ಬಿಟ್ಟು ಎಲ್ಲರೂ ಹತರಾಗುವವರಿದ್ದರು. (ಆದಿ ಹೇಳಿಕೆಗಳ ಪ್ರಕಾರ, ಪತ್ಮೋಸ ದ್ವೀಪಕ್ಕೆ ಗಡಿಪಾರು ಮಾಡಲ್ಪಟ್ಟ ಯೋಹಾನನನ್ನು ಬಿಟ್ಟರೆ, ಎಲ್ಲ ಅಪೊಸ್ತಲರು ಕೊಲ್ಲಲ್ಪಟ್ಟರು.) [56]ಈ ಪರಿಚ್ಛೇದವನ್ನು ಯೇಸು ಮೊದಲೊಮ್ಮೆ ತನ್ನ ವೈರಿಗಳ ಕುರಿತು ಮಾತಾಡುವಾಗ ಉಪಯೋಗಿಸಿದ್ದನು (ಮತ್ತಾಯ 22:43). ಆದಿ ಕ್ರೈಸ್ತ ಬರವಣಿಗೆಗಾರರಿಗೆ ಇದು ಬಹು ಪ್ರಿಯವಾಗಿತ್ತು (1 ಕೊರಿಂಥ 15:25; ಎಫೆಸ 1:20, 22; ಇಬ್ರಿಯ 1:13; 5:6-10). [57]ಕುರಿಯೊಸ್ ಎಂಬ ಪದವನ್ನು ಗ್ರೀಕ ಪರಿಚ್ಛೇದವು "ಕರ್ತನು" ಎನ್ನುವದಕ್ಕೆ ಎರಡೂಕಡೆಗಳಲ್ಲಿ ಉಪಯೋಗಿಸುತ್ತದೆ ಕೀರ್ತನೆ 110:1 ರಲ್ಲಿನ ಇಬ್ರಿಯ ಪದವು, "ಯೆಹೋವ" ಅಥವಾ "ಯಾಹ್ವೆ" ಎಂಬ ಪದವನ್ನು ಮೊದಲು ಉಪಯೋಗಿಸುತ್ತದೆ. ನಂತರ "ಅದೋನೈ" (ಕರ್ತನು). ಪೇತ್ರನು ಗ್ರೀಕ ಭಾಷಾಂತರದಿಂದ ಉಲ್ಲೇಖಿಸುತ್ತಿದ್ದರೂ, ಪರಿಶುದ್ಧಾತ್ಮನಿಗೆ ಎರಡು ಬೇರೆ ಪದಗಳು ಮನಸ್ಸಿನಲ್ಲಿ ಇದ್ದ ವೆಂದು KJV ಭಾಷಾಂತರಕಾರರು, ಗಮನಿಸುವದು ಅವಶ್ಯವೆನ್ನುತ್ತಾರೆ. [58]"ದಾವೀದನ ಸಿಂಹಾಸನ" ಅಥವಾ ಅದಕ್ಕೆ ಸಮಾನವಾದ ಯಾವ ಪದವನ್ನೂ ಮತ್ತೆ ಹೊಸ ಒಡಂಬಡಿಕೆಯಲ್ಲಿ ಉಪಯೋಗಿಸಲ್ಪಟ್ಟಿಲ್ಲ. ಈ ಹಂತದಿಂದ ಮುಂದೆ ನಾವು ಕೇವಲ ದೇವರ/ಯೇಸುವಿನ ಸಿಂಹಾಸನದ ಕುರಿತು ಓದುತ್ತೇವೆ. [59]ಕ್ರಿಸ್ತನು ಭೂಮಿಗೆ ಹಿಂತಿರುಗಿ ಬಂದು, ತನ್ನ ರಾಜ್ಯವನ್ನು ಯೆರೂಸಲೇಮಿನಲ್ಲಿ ಸ್ಥಾಪಿಸಿ, ನಿಜವಾದ ಸಿಂಹಾಸನದ ಮೇಲೆ ಕುಳಿತು (ಅವರು ಅದನ್ನು ದಾವೀದನ ಸಿಂಹಾಸನ ಎಂದು ಹೇಳುತ್ತಾರೆ) ಒಂದು ಸಾವಿರ ವರ್ಷಗಳ ವರೆಗೆ ಆಳುತ್ತಾನೆ ಎಂದು ಪ್ರಿಮಿಲ್ಲೆಯನಿಸ್ಟಗಳು ಹೇಳುತ್ತಾರೆ. ಕ್ರಿಸ್ತನು ಈಗಾಗಲೇ ತನ್ನ ರಾಜ್ಯವನ್ನು ಸ್ಥಾಪಿಸಿದ್ದಾನೆ, ಆತನು ಈಗಾಗಲೇ ದಾವೀದನ ಸಿಂಹಾಸನದ ಮೇಲೆ ಕುಳಿತು ಆಳುತಿದ್ದಾನೆ, ಮತ್ತು ಆತನ ಆಳ್ವಿಕೆಯು ಭೂಮಿಯಲ್ಲಿಲ್ಲ ಬದಲಾಗಿ ಪರಲೋಕದಲ್ಲಿ ಎಂದು ಅವರು ಅರ್ಥ ಮಾಡಿಕೊಳ್ಳುವಲ್ಲಿ ವಿಫಲರಾಗಿದ್ದಾರೆ. [60]"ದೇವರು ಆತನನ್ನು ... ಮಾಡಿದ್ದಾನೆ" ಎಂಬ ಪದಗಳು, ಯೇಸು ತನ್ನ ಪುನರುತ್ಥಾನದ ಮೊದಲು ಮೆಸ್ಸಿಯನಾಗಿರಲಿಲ್ಲವೆಂದಲ್ಲ. ತನ್ನ ಪುನರುತ್ಥಾನದ ಮೊದಲು ತಾನು ಮೆಸ್ಸೀಯನೆಂದು ಯೇಸುವೇ ಒಪ್ಪಿಕೊಂಡಿದ್ದನು (ಮಾರ್ಕ 14:61, 62). "ದೇವರು ಆತನನ್ನು ... ಮಾಡಿದ್ದಾನೆ" ಎಂಬ ಪದಗಳ ಅರ್ಥವೇನೆಂದರೆ, ಆತನನ್ನು ಸತ್ತವರೊಳಗಿಂದ ಎಬ್ಬಿಸುವದರ ಮೂಲಕ (ರೋಮಾಪುರ 1:4), ದೇವರು ಸರ್ವ ಮಾನವ ಕುಲಕ್ಕೆ ಆತನೇ ಮೆಸ್ಸೀಯನೆಂದು ತೋರಿಸಿದನು.

[61]ಈ ಉದಾಹರಣೆಯನ್ನು ನಾನು ಅನೇಕ ವರ್ಷಗಳ ಹಿಂದೆ ಜೇಮ್ಸ್ ಓ ಬಾಯರ್ಡ ಅವರು ಉಪಯೋಗಿಸಿದ್ದನ್ನು ಕೇಳಿದೆನು.

**ಅಪೊಸ್ತಲರಕೃತ್ಯದಲ್ಲಿನ ಪರಿವರ್ತನೆಗಳ ಚಿತ್ರಪಟ**

| ಬೋಧಿಸುವುದು | ನಂಬಿಕೆ | ಪುನರುತ್ಥಾನ | ಒಪ್ಪಿಕೊಳ್ಳುವದು | ದೀಕ್ಷಾಸ್ಥಾನ | ರಕ್ಷಣೆ |
|---|---|---|---|---|---|
| ಯೆಹೂದ್ಯರು<br>ಅ.ಕೃ 2 | "ಹೃದಯದಲ್ಲಿ ಅಲಗು ನಟ್ಟಂತಾಯಿತು" (ವಚನ 37) | "ಪಶ್ಚಾತಾಪ" (ವಚನ 38) | "ಯೇಸು ಕ್ರಿಸ್ತನ ಹೆಸರಿನ ಮೇಲೆ" (ವಚನ 38) | "ದೀಕ್ಷಾಸ್ನಾನ ಮಾಡಿಸಿಕೊಳ್ಳಿರಿ" (ವಚನಗಳು 38, 41) | "ಪಾಪಗಳ ಕ್ಷಮಾಪಣೆಗಳು" (ವಚನ 38) |
| ಸಮಾರ್ಯರು<br>ಅ.ಕೃ 8 | "ಅವರು ನಂಬಿದಾಗ" (ವಚನ 12) | | | "ದೀಕ್ಷಾಸ್ನಾನ ಮಾಡಿಸಿಕೊಂಡರು" (ವಚನ 12) | |
| ಇಥಿಯೋಪ್ಯನು<br>ಅ.ಕೃ 8 | "ನೀನು ನಂಬಿದರೆ" (ವಚನ 37) | | ["ಯೇಸು ಕ್ರಿಸ್ತನು ದೇವರ ಕುಮಾರನೆಂದು ನಾನು ನಂಬುತ್ತೇನೆ" (ವಚನ 37)] | "ದೀಕ್ಷಾಸ್ನಾನ ಮಾಡಿಸಿಕೊಂಡರು" (ವಚನಗಳು 36, 38) | "ಸಂತೋಷ ಹೊಂದನು" (ವಚನ 39) |
| ಸೌಲ<br>ಅ.ಕೃ 9; 22; 26 | | ಉಪವಾಸ ಪ್ರಾರ್ಥನೆ (9:9, 11) | "ಕರ್ತನೇ" (9:5) | "ದೀಕ್ಷಾಸ್ನಾನ ಮಾಡಿಸಿಕೊಂಡನು" (9:18; 22:16) | "ಪಾಪಗಳನ್ನು ತೊಳೆದುಕೋ" (22:16) |
| ಕೊರ್ನೇಲ್ಯನು<br>ಅ.ಕೃ 10; 11 | "ಆತನಲ್ಲಿ ನಂಬಿಕೆ ಇಡುವ" (10:43) | "ಜೀವಕ್ಕೆ ನಡೆಸುವ ಪಶ್ಚಾತಾಪ" (11:18) | | "ದೀಕ್ಷಾಸ್ನಾನ ಮಾಡಿಸಿಕೊಳ್ಳಿರಿ" (10:47, 48) | "ಪಾಪಗಳ ಕ್ಷಮೆ" (10:43) |
| ಲುದ್ಯಳು<br>ಅ.ಕೃ 16 | | | | "ದೀಕ್ಷಾಸ್ನಾನ ಮಾಡಿಸಿಕೊಂಡರು" (ವಚನ 15) | |
| ಸೆರೆಯ ಯಜಮಾನ<br>ಅ.ಕೃ 16 | "ಯೇಸುವಿನಲ್ಲಿ ನಂಬಿಕೆ ಇಟ್ಟರೆ" (ವಚನ 31); "ನಂಬಿಕೆ" (ವಚನ 34) | "ಗಾಯಗಳನ್ನು ತೊಳೆದು" (ವಚನ 33) | | "ದೀಕ್ಷಾಸ್ನಾನ ಮಾಡಿಸಿಕೊಂಡರು" (ವಚನ 33) | "ನೀವು ರಕ್ಷಣೆ ಹೊಂದುವಿರಿ ಆನಂದದಿಂದ ತುಂಬಿದವರಾರು" (ವಚನ 34) |
| ಕೊರಿಂಥ<br>ಅ.ಕೃ 18 | "ಸಹಿತ ನಂಬಿಕೆ ಇಟ್ಟನು" (ವಚನ 8) | | | "ದೀಕ್ಷಾಸ್ನಾನ ಮಾಡಿಸಿಕೊಳ್ಳುತ್ತಿದ್ದರು" (ವಚನ 8) | |

*ಅಪೊಸ್ತಲರಕೃತ್ಯದಲ್ಲಿನ ಪರಿವರ್ತನೆಗಳ ಚಿತ್ರಪಟ*